# Little KITES UNIT

# 2018-19




# Digital Magazine

# “ ಚಿಲುಮೆ "

# “ചിലുമെ”

# GHS Kadambar

# ಮುನ್ನುಡಿ

ಮಾಹಿತಿ ತಂತ್ರಜ್ಞಾನದ ಅಂಗವಾದ ಲಿಟಿಲ್ ಕೈಟ್ ಕ್ಲಬ್ ನ ಪ್ರಯತ್ನದ ಫಲವಾಗಿ ಜಿ.ಎಚ್.ಎಸ್.ಕಡಂಬಾರು ಶಾಲೆಯ ವಿದ್ಯಾರ್ಥಿಗಳ ''**ಚಿಲುಮೆ** ''ಎಂಬ ಡಿಜಿಟಲ್ ಮ್ಯಾಗಝಿನ್ ವೈವಿಧ್ಯಮಯ ಕೌಶಲ್ಯಗಳ ಚಿಮ್ಮುವ ಚಿಲುಮೆಯಾಗಿ ಮೂಡಿ ಬಂದಿರುತ್ತದೆ.ವಿದ್ಯಾರ್ಥಿಗಳ ಪ್ರಯತ್ನ ಮತ್ತು ಅಧ್ಯಾಪಕರ ಪ್ರೋತ್ಸಾಹದ ಪ್ರತಿರೂಪವಾಗಿ ಈ ಡಿಜಿಟಲ್ ಮ್ಯಾಗಝಿನ್ ಹೊರ ಹೊಮ್ಮಿದೆ.ಇದು ವಿದ್ಯಾರ್ಥಿಗಳ ಮುಂದಿನ ಜೀವನದಲ್ಲಿ ಸಹಾಯಕವಾಗಿ ಇನ್ನಷ್ಟು ಸಾಧನೆಯನ್ನು ಮಾಡಲು ಪ್ರೋತ್ಸಾಹಕರವಾಗಲಿ

ಎಂದುಹಾರೈಸುವ

ಮುಖ್ಯೋಪಾಧ್ಯಾಯರು

ಜಿ.ಎಚ್.ಎಸ್.ಕಡಂಬಾರು

# Editorial Board


Chief Editor : Shiva kumar.k -Head master

Staff Editor : Hemalatha.N - Little kite mistress


Student Editor : Vaishak. Y. Acharya – IX A.


## Members


- Dharmananda Kurup. A. R. - SITC
- Ranjith. P. V - JSITC
- Moosa Kunhi. D - Little kite master
- Gopi. V - HSA Kannda
- Divya - HSA Malayalam
- Abokare. K - HSA Phy. Science
- Mohammed Shaheer - HSA Maths
- Moosa kaleem - IX B
- Mohammed Ali - IX B
- Sushanth - IX B
- Mohammed Basheer - IX B
- Gowthami - IX A
- Nikhitha Shetty - IX A
- Fathima Salfath - IX C
- Ashura G - IX C

Aysha - IX A






Ahammed shahanawaz V.B


AMAGRA SHIKSHA KERALA, KASARAG
BRC MANJESHWAR
INTERNATIONAL DAY FOR PERSON
WITH DISABILITIES (IDPD)-2018
NTERNATIONA
DISABLE WEE
2018 November 27 to Decemb

# <u>ಅನುಕ್ರಮಣಿಕೆ</u>


| | | |
|---|---|---|
| 1 | ಬಾರೋ ಈ ಮಣ್ಣಿಗೆ ಮಳೆರಾಯ | ಸಾನಿಕ VII B |
| 2 | ನಕ್ಷತ್ರ | ಪುಷ್ಪವತಿ VII B |
| 3 | EDUCATION AND ITS IMPORTANCE | FATHIMA SALFATH IX C |
| 4 | ನವಕೇರಳ ನಿರ್ಮಾಣ | ತಿಲಕ್ VIII B |
| 5 | ಇಬ್ಬರು ಬಡವರು | ಜಯಶ್ರೀ VII B |
| 6 | കൂട്ടുകാരി | DIVYA PG |
| 7 | ಉಂಡ ಮನೆಗೆ ಎರಡು ಬಗೆಯಬಾರದು | ನಿಖಿತಾ ಶೆಟ್ಟಿ IX A |
| 8 | കണ്ണാടി | JISHNU P S .VIII C |
| 9 | ಸಂಖ್ಯಾ ಚತುರೆ ಶಕುಂತಲಾ ದೇವಿ | ಮೂಸಕಲೀಂ IX B |
| 10 | ಭಾರತ 29 ರಾಜ್ಯಗಳು | |
| 11 | ಓದಿದ್ದನ್ನು ನೆನಪಿಡುವ ವಿಧಾನ | ಅಲೀಮತ್ ತಮೀಮ IX A |
| 12 | ಪ್ರಚಂಡ ಮೀನುಗಳು | ಸಾನಿಕ VII B |
| 13 | ಅತಿಯಾಸೆ ಗತಿಗೇಡು | ಪುಷ್ಪವತಿ VII B |
| 14 | ಲಿಟಿಲ್ ಕೈಟ್ ಶಿಬಿರ | |
| 15 | ನಮ್ಮ ಮಳೆ | ರೀತೇಶ್ VI A |

| | | |
|---|---|---|
| 16 | ದಿನಚರಿ | ತಿಲಕ್ VIII B |
| 17 | പാത്തുവിന്റെ ചിത്രം | FATIMATH RAIHANATH X B |
| 18 | നവകേരള സൃഷ്ടി | ZUBAIR K H VIII C |
| 19 | ಜೀವನ ಮೌಲ್ಯ ಕಲಿಸಿದ ಶಿಕ್ಷಕರು | ನಿಖಿತಾ ಶೆಟ್ಟಿ IX A |
| 20 | ನೀರು ಕುಡಿಯದ ಪ್ರಾಣಿ | ಗೌತಮಿ IX A |
| 21 | ಛಲದಿಂದ ಗೆಲುವು | ನಿಖಿತಾ ಶೆಟ್ಟಿ IX A |
| 22 | ಕೃಷಿಯೇ ಜೀವನ | ವಿದ್ಯಾ ಶ್ರೀ ಎಮ್. ಕೆ X |
| 23 | ಅಮ್ಮ ಎಂದರೆ ಏನೋ ಹರುಷವೊ | ಗೌತಮಿ IX A |
| 24 | ಸಂಖ್ಯೆಗಳ ಮೋಜು | ಮೊಹಮ್ಮದ್ ಅಮೀರ್ IX A |
| 25 | ಮಳೆ | ಕದೀಜತ್ ಮುಬೀನ VI B |
| 26 | ಜಾಣ್ಮೆ ಗಣಿತ 9 ರ ಮ್ಯಾಜಿಕ್ | ಫಾತಿಮತ್ ತಬ್ ಶೀರ IX B |
| 27 | ಮಳೆಯ ರಭಸ | ರಮ್ಯ VII B |

# ಬಾರೋ ಈ ಮಣ್ಣಿಗೆ ಮಳೆರಾಯ

ಬಾರೋ ಈ

ಮಣ್ಣಿಗೆ ಮಳೆರಾಯ

ನೀರನ್ನು ಸುರಿಸು

ಮಳೆರಾಯ

ತಂಪನ್ನು ನೀಡು ಮಳೆರಾಯ ||2||

ಬಿತ್ತಿದಂತ ಬೆಳೆಯ

ಬೆಳೆಸೋ ಮಳೆರಾಯ

ಕೊಳದಲ್ಲಿ ನೀರಾ

ತುಂಬಿಸೋ ಮಳೆರಾಯ

ತುಂತುರು ಮಳೆ ಸುರಿಸೋ ಮಳೆರಾಯ ||2||

ನೀರಿಂದ ಬದುಕುತ್ತೇವೆ

ಮಳೆರಾಯ

ಮಳೆಯ ಸುರಿಸೋ ಮಳೆರಾಯ ||2||

ಎಲ್ಲಿ ಎಲ್ಲಿಗೆ ಹೋಗುವೆ

ನಿಲ್ಲು ಮಳೆರಾಯ

ಸೂರ್ಯನ ತಾಪದಿಂದ

ಬೆಂದೆನಾವು

ಮಳೆರಾಯ ಸುರಿಸೋ ಮಳೆರಾಯ ||2||

ಪ್ರಕೃತಿಯ ಗಿಡಮರ ಸುಟ್ಟು ಹೋದರು

ನಿನಗೆಕೆ ಕರುಣೆ ಬರಲಿಲ್ಲವೇ

ಮಳೆರಾಯ

ನನ್ನ ಹೃದಯ ಮಿಡಿಯುತಿದೆ

ಮಳೆರಾಯ ಸುರಿಸೋ

ಮಳೆರಾಯ ||2||

ತುಂಬಾ ನೀರಿನ ಕೊರತೆ ಇದೆ

ಮಳೆರಾಯ

ತುಂಬಾ ಬಾಯಾರಿಕೆ

ಆಗುತಿದೆ ಮಳೆರಾಯ

ಮಳೆರಾಯ ಸುರಿಸೋ

ಮಳೆರಾಯ ||2||

ನೀರನ್ನು ಮಿತವಾಗಿ

ಬಳಸಿರಿ

ದಯಮಾಡಿ ನೀರನ್ನು

ಪೊಲು ಮಾಡದಿರಿ||2||

Sanika VIIB

# ನಕ್ಷತ್ರ

ಬಾರೇ ಬಾರೇ ನಕ್ಷತ್ರ
ಮಿನುಗುತ ಮಿನುಗುತ ನಕ್ಷತ್ರ… ||2||

ನನ್ನಯ ತಮ್ಮನು
ಅಳುತಲಿ ಇರುವನು
ನಗುವನು ತಾರೇ ನಕ್ಷತ್ರ…||2||

ತಂಗಿಯ ಕಣ್ಣಲಿ
ಬೆಳಕನು ಹರಿಸಿ
ಮಿನುಗುತ ಬಾರೇ ನಕ್ಷತ್ರ…ನಕ್ಷತ್ರ…||2||

ಬಾನಂಗಳದಾ ಗೆಳೆಯರ ಬಳಗವ
ಕರೆಯುತ ಬಾರೇ ನಕ್ಷತ್ರ
ನಮ್ಮಂಗಳದಿ ಬೆಳಕನು ಹರಡಿ
ಮಿನುಗುತ ಮಿನುಗುತ ನಕ್ಷತ್ರ ||2||

ನಾನೂ ನೀನೂ
ಜೊತೆ ಜೊತೆಯಾಡುವ
ಬಾರೇ ಮುದ್ದಿನ ನಕ್ಷತ್ರ
ಬಾನಲ್ಲೇಕೆ ಸುಮ್ಮನೆ ನಿಂತಿಹೆ?
ಕೋಪದೇ ನಿನಗೆ ನನ್ನತ್ರಾ ? ||2||

ಅಪ್ಪನಿಗೇಳಿ ವಿಮಾನ ಕಳಿಸುವೆ
ಬಾರೇ ನಮ್ಮಯ ಮನೆ ಹತ್ರ
ಚಂದ್ರನ , ಸೂರ್ಯನ ಜೊತೆಯಲಿ ನಲಿಯುವ
ಬಾರೇ ಮಿನುಗುತ ನಕ್ಷತ್ರ…!
ಬಾರೇ ನನ್ನಯ ನಕ್ಷತ್ರ ||2||


ಪುಷ್ಪಾವತಿ VII B

# Education and its importance

Education is the most powerful weapon. We should use the weapon in the right manner. Education helps us to reach high level. School makes us good citizens. Schools give us education, teachers help us to acquire knowledge. Nelson Mandela said that education is the most powerful weapon. Education can change the world. As We know water is precious for us, in the same way education is also precious . Education makes us good persons and thus the society becomes good . People will respect us. They will treat us in good manner. We will think that if we would not have education or knowledge we won’t get any respect from anyone we have to thank god for giving us a wonderful life don't misuse the school life. Study well as you can, we will get the jobs. Sometimes we may become lucky enough to become famous person in the world. If we are not educated we will become useless. While you are sitting simply you can read books, short stories, essays, speech everything. While we are reading the books we will get some ideas like how to write stories,, essays, speech everything. The teacher will appreciate us and congrats. We will become more happy. We start dreaming from our childhood days. We should dream and make an aim for our coming life time. Think before you act. Whenever you are doing anything you should think not for one time but at least three times, and make a decisions. It should become a good decision. So study as much as you can. Life is a toughest task. We should fight with them by studying .For this use the weapon of education, a page of book and a pen can change the world without knife

**'' MAKE IT GOAL AND IT LET IT**
**BRING SUCCESS YOUR LIFE ''**
**''EDUCATION IS IMPORTANT IN YOUR LIFE''**

FATHIMA SALFATH IX C


GHS KADAMBAR
A.P ABDUL HASIR HUSAIN
VIIth std


Faizal 7A
Faizal 7A

# ನವಕೇರಳ ನಿರ್ಮಾಣ

ನವಕೇರಳ ನಿರ್ಮಾಣ
ಅದರಲ್ಲಿ ನಾವು ತೊಡಗೋಣ
ಆ ಕೆಲಸಕ್ಕೆ ಸಹಕರಿಸೋಣ
ಬನ್ನಿರಿ ಎಲ್ಲರು ಜೊತೆಯಲಿ ಸೇರೋಣ

ಕೇರಳಕ್ಕೆ ಬಂದಿದೆ ಭಯಂಕರ ಪ್ರಳಯ
ಅದನ್ನು ಕಂಡು ಜನರಲ್ಲಿ ಮೂಡಿದೆ ಭಯ
ಬೇಕಾಗಿದೆ  ಎಲ್ಲರ ಸಹಾಯ
ಜೊತೆಯಲ್ಲಿ ಒಳ್ಳೆಯ ಉಪಾಯ

ಬನ್ನಿರಿ ಗೆಳೆಯರೆ ಒಂದಾಗೋಣ
ನಡೆದು ಹೋದ ಘಟನೆ ಮರೆಯೋಣ
ಒಗ್ಗಟ್ಟಾಗಿ ನಾವಿನ್ನು ಬಾಳೋಣ
ಇನ್ನಾದರು ಒಗ್ಗಟ್ಟಾಗಿ ಕಷ್ಟವ ಎದುರಿಸೋಣ

**ತಿಲಕ್** VIII

# ಇಬ್ಬರು ಬಡವರು

ಒಂದು ಊರಿನಲ್ಲಿ ಇಬ್ಬರು ಬಡವರು ಇದ್ದರು. ಅವರಿಗೆ ಒಂದು ಸಣ್ಣ ಗುಡಿಸಲುಇತ್ತು.ಅದರಲ್ಲಿ ಒಬ್ಬನಿಗೆ ತನ್ನ ದೇಅದ ಒಂದು ಕುಟುಂಬ ಇತ್ತು.ಮತ್ತೊಬ್ಬನಿಗೆಯಾರು ಇರಲಿಲ್ಲ. ಒಬ್ಬನು ದೇವರ ಭಕ್ತನಾಗಿದ್ದನು ಇನ್ನೊಬ್ಬನು ರಾಜನಭಕ್ತನಾಗಿದ್ದನು.ದೇವರ ಭಕ್ತನಾದವನು ಸ್ವಲ್ಪಸ್ವಲ್ಪ ದುಡಿದು ಸಂಸಾರವನ್ನು ಸಾಗಿಸುತಿದ್ದನ. ರಾಜನಭಕ್ತನಾದವನು ಹಣವನ್ನುಕುಡಿದು ಮುಗಿಸುತಿದ್ದನು . ಒಂದು ದಿನ ರಾಜನ ಭಕ್ತನಲ್ಲಿ ಒಂದು ರೂಪಾಯಿಯು ಇರಲಿಲ್ಲ ಆಗ ಅವನ ಮನೆಯನ್ನು ಮಾರಿದನು. ಅದರಲ್ಲಿ ಸಿಕ್ಕಿದ ಹಣವನ್ನು ಕುಡಿದು ಮಗಿಸಿದನು. ಒಂದು ದಿನ ರಾಜನು ಅವನ ಇಬ್ಬರು ಸೈನಿಕರನ್ನು ಕಳಿಸಿ ಸೈನಿಕರು ಎಲ್ಲರಿಗೂ ಹಳೆಯ ಬಟ್ಟೆಯನ್ನು ಹಾಕಿಕೊಂಡು ಹೊರಟರು. ಆ ಸೈನಿಕರು ರಾಜನ ಭಕ್ತನತ್ತಿರ ಹೋದರು. ಅವನಿಗೆ ಒಂದು ಚಿನ್ನದ ನಾಣ್ಯವನ್ನು ಕೊಟ್ಟರು ಆಗ ರಾಜನ ಭಕ್ತ ಹೇಳಿದ,ನಿಮಗೆ ಆ ರಾಜನು ಒಳ್ಳೆಯದು ಮಾಡಲಿ ಎಂದನು. ದೇವರ ಭಕ್ತನ ತಂದೆ ತೀರಿ ಹೋದರು. ತಂದೆಯ ಅಂತ್ಯಕ್ರಿಯೆಗೆ ಅವನತ್ತಿರ ಒಂದು ರುಪಾಯಿ ಇರಲಿಲ್ಲ ಆಗ ರಾಜನ ಸೈನಿಕರು ಒಂದು ಅವನಿಗೆ ಚಿನ್ನದ ನಾಣ್ಯವನ್ನುಕೊಟ್ಟರು. ಆಗ ಸಹಾಯ ಮಾಡಿದಕ್ಕೆ ದೇವರು ನಿಮಗೆ ಒಳ್ಳೆಯದು ಮಾಡಲಿ ಎಂದರು.ಆಗ ಸೈನಿಕರಿಗೆ ಆಶ್ಚರ್ಯವಾಯಿತು 'ರಾಜನ ಭಕ್ತರು

ಇದ್ದಾರೆಯೆ!ಕೂಡಲೇ ರಾಜನತ್ತಿರ ಹೋದರು . ರಾಜನಿಗೆ ವಿಷಯವನ್ನು ತಿಳಿಸಿದರು. ಆಗ ರಾಜನಿಗೆ ತುಂಬಾ ಸಂತೋಷವಾಯಿತು ಆಗ ರಾಜನಿಗೆ ನನ್ನ ಭಕ್ತನಿಗೆ ಏನಾದರು ? ಕೊಡಬೇಕು ಶ್ರೀಮಂತನಾಗಬೇಕು ಎಂದೆನಿಸಿತು. ಹಾಗೆ ಬಂದು ಅದನ್ನು ಎಲ್ಲರಿಗೂ ಬಹುಮಾನ ಹಂಚಿದನು.ಅಲ್ಲಿಗೆ ದೇವ ಭಕ್ತ ರಾಜ ಭಕ್ತನು ಅಲ್ಲಿಗೆ ಬಂದರು. ದೇವರ ಭಕ್ತನಿಗೆ ಬಹುಮಾನ ಹಂಚಿದನು.ರಾಜ ಭಕ್ತನಿಗೆ ಒಂದು ಕುಂಬಳಕಾಯಿಯನ್ನು ಕೊಟ್ಟನು.ರಾಜನ ಭಕ್ತನಿಗೆ ತುಂಬಾ ಬೇಸರವಾಯಿತು.ಅವನು ಆ ಕುಂಬಳಕಾಯನ್ನು ಅಂಗಡಿಗೆ 10 ರೂಪಾಯಿಗೆ ಮಾರಿದನು.ಅಲ್ಲಿಗೆ ದೇವರ ಭಕ್ತನಾದವನು ತಂಗೆಯ ಉತ್ತರಕ್ರಿಯೆಗೆ ತರಕಾರಿಯನ್ನು ತೆಗೆಯಲು ಬಂದನು. ಅಲ್ಲಿ ಕುಂಬಳಕಾಯಿಯನ್ನು ಕೇಳಿದನು. ಅವನು ರಾಜನ ಭಕ್ತ. ಕೊಟ್ಟ ಕುಂಬಳಕಾಯಿಯನ್ನು ಕೊಟ್ಟನು. ಅದನ್ನು ಮನೆಗೆ ತೆಗೆದು ಕೊಂಡು ಹೋದನು. ಮನೆಯಲ್ಲಿ ಅದನ್ನು ಭಾಗ ಮಾಡುವಾಗ ಅದರಲ್ಲಿ ತುಂಬಾ ಚಿನ್ನದ ನಾಣ್ಯಗಳಿದ್ದವು. ಆಗ ಅವನಿಗೆ ನನಗೆ ದೇವರು ಈ ಹಣವನ್ನು ಕೊಟ್ಟರು ಎಂದು ಬಹಳ ಸಂತೋಷವಾಯಿತು.ಅದರಲ್ಲಿ ಅವನು ತಂದೆಯ ಉತ್ತರಕ್ರಿಯೆಯನ್ನು ಬಾರಿ ಗಮ್ಮತ್ ನಲ್ಲಿ ಮಾಡಿದನು. ಅನಂತರ ಚಿನ್ನದ ನಾಣ್ಯಗಳಲ್ಲಿ
ಅವನು ದೊಡ್ಡ ಅರಮನೆಯನ್ನು ಮತ್ತು ಊರಿನ ಮಕ್ಕಳಿಗೆ ಒಂದು ಶಾಲೆಯನ್ನು ಕಟ್ಟಿಸಿದನು. ಮತ್ತು ಊರಿಗೆ ರಾಜನಾದನು. ರಾಜನ ಭಕ್ತನತ್ತಿರ ಸೈನಿಕರು ಬಂದರು. ಸೈನಿಕರು ಕೇಳದರು ನೀನು ಆ

ಕುಂಬಳಕಾಯಿಯನ್ನು ಏನು ಮಾಡಿದೆ. ಆಗ ರಾಜನ ಭಕ್ತ ನಾನು ಅದನ್ನು ಅಂಗಡಿಗೆ ಮಾರಿದೆನು. ಒಂದು ದಿನ ದೇವರ ಭಕ್ತ ನನ್ನ ಗೆಳೆಯ ರಾಜನ ಭಕ್ತನಿದ್ದನಲ್ಲಿಗ ಅವನನ್ನು ನೋಡಬೇಕು ಎಂದೆನಿಸಿತು.ಅವನು ರಾಜನ ಭಕ್ತನನ್ನು ನೋಡಲು ಹೋದನು. ಅಲ್ಲಿ ಅವನ ಗಡ್ಡ ಮೀಸೆಯನ್ನು ಬಿಟ್ಟಿದನು. ನಂತರ ದೇವ ಅವನ ದೀನಪರಿಸ್ಥಿತಿಯನ್ನು ನೋಡಿ ಅವನಿಗೆತನ್ನ ಕೈಲಾದ ಸಹಾಯ ಮಾಡಿದನು. ಮುಂದೆ ಅವರು ಅನ್ಯೋನ್ಯವಾಗಿ ತಮ್ಮ ಕುಟುಂಬದೊಂದಿಗೆ ಸುಖವಾಗಿ ಬಾಳಿದನು.

ಜಯಶ್ರೀ

**VII B**

# കൂട്ടുകാരി

അവൾക്കായ്  ഞാൻ കാത്തിരിക്കുന്നു.അവളുടെ സംഗീതം കേൾക്കാൻ, അവളുടെ നൃത്തം കാണാൻ, അവളുടെ നനുത്ത സ്പർശനത്തിനായ്......... .........

എൻെറ  പുതിയവീടിനു മുമ്പിൽ കാത്തിരുന്നു. പെട്ടെന്ന്  ആകാശം പൊട്ടിപ്പിളർന്ന് ഒരു മിന്നൽ ചിരിയോടെ നാണം കുണുങ്ങി അവൾ വന്നു. അവളെ സ്വീകരിക്കാൻ  ഞാൻ മുററത്തേക്ക്ഓടി. അവളെ ഞാൻ എന്നിലേക്ക് സ്വീകരിച്ചപ്പോൾ അവളെന്നെ വാരിപ്പുണർന്നു. പുതുമഴ നനഞ്ഞാൽ പനിവരും, പറഞ്ഞില്ലെന്ന് വേണ്ട... അമ്മയുടെ ശാസന കേട്ടില്ലെന്ന് നടിച്ചു.അമ്മയുടെ പരിഭവം സഹിക്കാൻ വയ്യാതെവന്നപ്പോൾ ഞാൻ വീട്ടിൽ കയറി മേലും തലയും തുവർത്തി.എൻെറ സങ്കടങ്ങൾ എൻെറ സന്തോഷങ്ങൾ എല്ലാം ഞൻ മഴയോട്പറഞ്ഞു. എൻെറ പുതിയ വീടെങ്ങനെ? നിനക്കിഷ്ടപ്പെട്ടോ ഞാൻ മഴയോടു ചോദിച്ചു. ഇപ്പോൾ മഴ നിർത്താതെ പെയ്യുകയാണ്. വീട്ടുമുററത്ത് വെള്ളം

കയറി........... വീട്ടിനുള്ളിൽ വെള്ളം കയറി......മഴ പതിയെ പതിയെ എൻെറ വീടിനെ വിഴുങ്ങുന്നത് ഞാൻ ഭയത്തോടെ നോക്കിനിന്നു. ഞാനിപ്പോൾ നിന്നെ വെറുക്കുന്നു....പോ മഴേ പോ...ഞാൻ അലറിക്കരഞ്ഞു..........അവളുടെ കരച്ചിൽ മഴയുടെ ആർത്തലച്ച ഇരമ്പിനേക്കാൾ ഉച്ചത്തിൽ അവിടെ മുഴങ്ങി.......

**ചെറുകഥ**

ദിവ്യ. പി.ജി

# ಬದುಕಿನಲ್ಲಿ ಹೊಸ ದಿನ

ರಾಜೀವ ಒಂದು ದೊಡ್ಡ ಆಫೀಸಿನಲ್ಲಿ ಕೆಲಸ ಮಡುತ್ತಿದ್ದ. ಅವರು ಯಾರಿಗೂ ಮೋಸ ಮಾಡುವ ಮನಸ್ಸು ಅವನಿಗೆ ಇರಲಿಲ್ಲ. ಒಳ್ಳೆಯವನಿಗೆ ಒಳ್ಳೆಯ ಯಜಮಾನರು ಸಿಕ್ಕರು. ಆಫೀಸ್ ಯಜಮಾನನ ಕೈಯಲ್ಲಿ ಇದ್ದರು ಅದನ್ನು ರಾಜೀವ ಒಳ್ಳೆ ರೀತಿಯಲ್ಲಿ ನಡೆಸುತ್ತಿದ್ದನ್ನು. ರಾಜೀವ ಯಜಮಾನನ ಎರಡು ಮಕ್ಕಳು ಅವರಿಗೆ ಕಷ್ಟ ಎಂದರೇನು ಎಂದು ಅವರಿಗೆ ಗೊತ್ತಿರಲ್ಲಿಲ್ಲ.

ಎರಡು ಮಕ್ಕಳು ಇದ್ದರು ಯಜಮಾನ ಮಾತ್ರ ರಾಜೀವನ್ನು ತನ್ನ ಸ್ವಂತ ಮಗನಂತೆ ನೋಡಿಕೊಳ್ಳುತ್ತಿದ್ದರು. ಅವರು ಅವರ ಎರಡು ಮಕ್ಕಳನ್ನು ಜವಾಬ್ದಾರಿಂದ ಸಾಕುತ್ತಿದ್ದರು ಅದರೆ ಅವರ ಎರಡು ಮಕ್ಕಳು ಅಪ್ಪನ ಮಾತಿಗೆ ಕಿವಿ ಕೊಡದೆ ಪಾರ್ಟಿ ಅಂತ ಹಣವನ್ನು ಹಾಳುಮಾಡುತ್ತಿದ್ದರು. ಅಪ್ಪ ಮಾತ್ರ ಅವರಿಗೆ ಎಷ್ಟು ಒಳ್ಳೆ ಮಾತು ಹೇಳಿದರು ಇವರು ಕೇಳುತ್ತಿರಲಿಲ್ಲ . ಅದರೆ ರಾಜೀವನಿಗೆ ಯಜಮಾನ ನ ಮಾತು ಅಂದರೆ ವೇದವಾಕ್ಯ. ಏನು ಹೇಳಿದರು ಆಗುದಿಲ್ಲ ಎಂದು ಹೇಳುತ್ತಾರೆ.

ಹೀಗೆ ಕಾಲ ಕಳೆಯುವಾಗ ರಾಜೀವನಿಗೆ ಒಂದು ದಿನ ಜೋರಾಗಿ ಜ್ವರ ಬಂತು. ಏವನಿಗೆ ಡಾಕ್ಟರ್ ಮದ್ದು ಕೊಟ್ಟು ಹೇಳದರು ನೀನು ಒಂದು ವಾರ ರೆಸ್ಟ್ ತೆಗೆದುಕೊಳ್ಳಿ. ರಾಜೀವ ಇಲ್ಲದ ದಿವಸ ಆಫೀಸ್ ನಲ್ಲಿ ಬಾರಿ ದೊಡ್ಡ ವ್ಯಾವಾರ ನಡೆಯುತ್ತಿತು. ರಾಜೀವ ಒಂದು ವಾರ ಕಳೆದ ನಂತರ ಆಫೀಸ್ ಗೆ ಹೋಗಿ ನೋಡುತ್ತಾನೆ. ಆಗ ತುಂಬ ಹಣ ಲೆಕ್ಕದಲ್ಲಿ ತಲುಪುತ್ತದೆ . ಅದು ಹೇಗೆ ಎಂದು ರಾಜೀವ ಯೋಚನೆ ಮಾಡುತ್ತಿದ್ದ. ಹೀಗೆ ದಿನಗಳು ಕಳೆದವು ಆದರೂ ಲೆಕ್ಕ ಭರ್ತಿ ಬರುದಿಲ್ಲ. ಸ್ವಲ್ಪ ದಿವಸದಲ್ಲಿ

ರಾಜೀವನಿಗೆ ತಿಳಿಯಿತು ಇದರಲ್ಲಿ ಯಜಮಾನ ದೊಡ್ಡ ಮಗನ ಕೈವಾಡ ಇದೆಂದು ತಿಳಿಯಿತು.

ಆದರೂ ರಾಜೀವ ಯಜಮಾನನಲ್ಲಿ ಯಾವ ವಿಷಯವನ್ನು ಹೇಳದೆ ಅವನು ಮನಸ್ಸಿನಲ್ಲಿ ಇಟ್ಟುಕೊಂಡ. ಒಂದು ದಿನ ರಾಜೀವ ಆಫೀಸ್ ನಲ್ಲಿ ಇರುವಾಗ ಅವನಲ್ಲಿ ಕೇಳುತ್ತಾನೆ. ಅದಕ್ಕೆ ಅವನು ರಾಜೀವ ನನ್ನು ಹೆದರಿಸುತ್ತಾನೆ. ಅದಕ್ಕೆಲ್ಲ ರಾಜೀವ ಭಯ ಪಡಲ್ಲಿಲ್ಲ. ಸ್ವಲ್ಪ ಹೊತ್ತು ಕಳೆದ ನಂತರ ಹೇಳುತ್ತಾನೆ ಒಂದು ವಾರದಲ್ಲಿ ಹಣವನ್ನು ಆಫೀಸಿಗೆ ತಲುಪಿಸಬೇಕು. ಇಲ್ಲದದ್ದಿರೆ ನಿನಗೆ ಎಲ್ಲ ವಿಷಯವನ್ನು ರಾಜೀವನ ಅಪ್ಪನಲ್ಲಿ ಹೇಳಿರ ಬಹುದೆಂದು ಇವನು ಮನೆಗೆ ಹೋಗದೆ ಆಫೀಸ್ ನಲ್ಲಿ ಕುಳಿತು ಕೊಂಡಿದ್ದ. ಇದನೆಲ್ಲ ರಾಜೀವನಿಗೆ ನೋಡಿ ಬೇಸರವಾಯಿತು. ಅದಕ್ಕೆ ರಾಜೀವ ಪುನಃ ಒಳ್ಳೆ ಬುದ್ದಿಯನ್ನು ಹೇಳುತ್ತಾನೆ ಅದರೆ ಇವನು ಬದಲಾಗುವುದಿಲ್ಲ ಎಂದು ರಾಜೀವನಿಗೆ ತಿಳಿಯಿತು.

ದೊಡ್ಡನಿಗೆ ಪಾರ್ಟಿ ಹುಚ್ಚು. ಅದರೆ ಚಿಕ್ಕವನಿಗೆ ಹೆಣ್ಣು ಹುಚ್ಚು ಇವನು ಕೆಲವು ಕಡೆಯಲ್ಲಿ ಏಟು ತಿಂದಿದ್ದಾನೆ. ದಿನ ಕಳೆದಾಗ ಯಜಮಾನನಿಗೆ ಅವರ ಎರಡು ಮಕ್ಕಳ ಕೆಟ್ಟ ಬುದ್ದಿ ಯಜಮಾನನಿಗೆ ತಿಳಿಯಿತು. ಆಗ ಯಜಮಾನ ರಾಜೀವನಲ್ಲಿ ಕೇಳಿದಾಗ ಅವನು ಯಜಮಾನನಲ್ಲಿ ಯಾವ ವಿಷಯವನ್ನು ಹೇಳಿಲಿಲ್ಲ. ಯಾಕೆಂದರೆ ಅವನಿಗೆ ಏನಾದರೂ ಮಾಡಿಬಿಡುತ್ತಾರೆ ಎಂದು ರಾಜೀವ ನಿಗೆ ಭಯವಾಯಿತು.

ಅವರೂ ಯಜಮಾನನಲ್ಲಿ ಯಾವ ವಿಷಯವನ್ನು ಹೇಳದೆ ಪ್ರೀತಿಯಿಂದ ಒಂದು ಮಾತು ಹೇಳಿದ. ಅವರನ್ನು ನನ್ನ ಜೊತೆ ಆಫೀಸ್ ಗೆ ಬಿಡಿ ಅವರನ್ನು ನಾನು ಸರಿ ಮಾಡುತ್ತೆನೆಎಂದು ಭಾಷೆ ಕೊಡುತ್ತಾನೆ. ಯಜಮಾನ ಅದಕ್ಕೆ ಒಪ್ಪಿ ಇಬ್ಬರಿಗೆ ಆಫೀಸ್ ನಲ್ಲಿ ಕೆಲಸ ಕೊಟ್ಟರು ಆಫೀಸ್

ನಲ್ಲಿ ಕಷ್ಟದ ಕೆಲಸ ಕೊಡುತ್ತಿದ್ದನು. ದಿವಸ ಕಳೆದಂತೆ ಆಫೀಸ್ ನ ಕೆಲವು ವಿಷಯ ಅವರಿಗೆ ತಿಳಿಯುತ್ತಾ ಬಂತು ಹೊಸ ಹೊಸ ಬದಲಾವಣೆಯು ಆಯಿತು. ಹಣದ ಬೆಲೆ ಏನೆಂದು ತಿಳಿಯಿತು. ಆಫೀಸನ್ನು ಒಳ್ಳೆ ರೀತಿಯಲ್ಲಿ ಬೆಳೆಯುತ್ತಾ ಹೋಯಿತು ಒಂದಲ್ಲ ಎದಡಲ್ಲ ಇಂತಹ ನಾಲ್ಕುಆಫೀಸ್ ಮಾಡಿದರು. ರಾಜೀವ ಅವರಿಗೆ ಮಾರ್ಗದರ್ಶನ ನೀಡುತ್ತಾ ಬಂದ. ಇಡೀ ದೇಶದಲ್ಲಿ ಅತಿ ದೊಡ್ಡ ಆಫೀಸಾಗಿ ಬೆಳೆಯಿತು. ಆಫೀಸ್ ನಲ್ಲಿ ಸಂಭ್ರಮಾಚರಣೆ ನಡೆಯಿತು. ಆಗ ಯಜಮಾನು ಬಂದು ಮಾತನ್ನು ಹೇಳಿದರು.

ಎಷ್ಟೇ ಶೀಮಂತ ನಾದರು ಎಷ್ಟೇ ಬಡವನಾದರು ಹಣಕ್ಕೆ ಬಲಿಯಾಗುತ್ತಾರೆ. ಕೆಲವರು ಹಣವನ್ನು ಒಳ್ಳೆಯ ರೀತಿಯಲ್ಲಿ ಉಪಯೋಗಿಸುತ್ತಾರೆ. ಕೆಲವರು ದುರುಪಯೋಗ ಮಾಡುತ್ತಾರೆ. ಇವತ್ತು ನನ್ನ ಮಕ್ಕಳು ಹೀಗೆ ಬೆಳೆಯಲು ಕಾರಣ ರಾಜೀವ. ಯಾಕೆಂದರೆ ಹಾಳಾಗಲು ಒಂದು ದಿನ ಸಾಕು. ಒಳ್ಳೆಯವರು ಆಗಲು ಸಾವಿರ ಜನ್ಮ ಸಾಲದು. ರಾಜೀವನಂತೆ ಒಬ್ಬನು ಇದ್ದರು ಇಡೀ ಸಮಾಜಕ್ಕೆ ಮಾದರಿ ಎಂದು ಅವರು ಹೇಳುತ್ತಾರೆ.

ರಾಜೀವನಿಗೆ ಈ ಮಾತನ್ನು ಕೇಳಿ ಕಣ್ಣಿನಲ್ಲಿ ನೀರು ಬಂತು. ಸಂತೋಷದಿಂದ ಮನೆಗೆ ಬರುತ್ತಾನೆ. ಆ ಮಾತನ್ನು ನೆನಪಿಸಿ ನಲಿಯುತ್ತಾನೆ, ನಗುತ್ತಾನೆ ಯಾಕೆಂದರೆ ಅವನಿಗೆ ಅದು‘ಬದುಕಿನಲ್ಲಿ ಹೊಸ ದಿನ ’.

* * * ನಿರೀಕ್ಷಾ, **XA**

# കണ്ണാടി

പണ്ട്

എൻ മുഖം നോക്കുമ്പോൾ-

ചൊല്ലീ കണ്ണാടി......

കൈതവം കാട്ടാതെ,

ചൊല്ലീ കണ്ണാടി

എൻേറയും നിൻേറയും

ചങ്ങാതി കണ്ണാടീ

ഇന്ന്

ഞാൻ മുഖം നോക്കുന്നത്

മൊബൈൽ ഫോൺ സെൽഫിയിൽ

ഇത് ചൊല്ലുന്നത് കൈതവം പക്ഷേ

ഏറെ ഇഷ്ടം ഇതിനോട്........

Jishnu p.s 8.c

# ಉಂಡ ಮನೆಗೆ ಎರಡು ಬಗೆಯಬಾರದು

ನಾವು ಆಶ್ರಯಿಸಿದ ಮನೆ ಅಂದರೆ ನಮಗೆ ಅನ್ನ ಕೊಡುವ ಮನೆ.ಎಲ್ಲಿ ನಾವು ನೌಕರಿ ಮಾಡುತ್ತೇವೆಯೋ ಯಾವ ಮನೆಯಿಂದ ನಮಗೆ ಅನ್ನ ಸಿಗುತ್ತದೆಯೋ ಆ ಮನೆಯ ಅನ್ನವನ್ನು ತಿಂದು ಆ ಮನೆಗೆ ದ್ರೋಹ ಮಾಡಬಾರದು ಎಂದು ತಿಳಿಸಿ ಹೇಳುತ್ತದೆ ಈ  ಗಾದೆ. ನಾವು ಹಸಿವಿನಿಂದ ಬಳಲುತ್ತಿರುವಾಗ ಯಾರೋ ನಮ್ಮನ್ನುಉಪಚರಿಸುತ್ತಾರ. ನಾವು ಕಷ್ಟದಲ್ಲಿದ್ದಾಗ  ಯಾರೋ ನಮಗೆ ಸಹಾಯ ಮಾಡುತ್ತಾರೆ.

ಹೀಗೆ ನಮಗೆ ಕಷ್ಟ ಕಾಲದಲ್ಲಿ ಸಹಾಯ ಮಾಡಿದವರಿಗೆ ನಾವು ಮೋಸ ವಂಚನೆ ಮಾಡಬಾರದು.ಅವರು ಮಾಡಿದ ಉಪರಾರಕ್ಕೆ ನಾವು ಅವರಿಗೆ ಕೃತಜ್ಞರಾಗಿರಬೇಕು. ಎಂದಿಗೂ ಅವರಿಗೆ ದ್ರೋಹ ಬಗೆಯಬಾರದು.ನಾವು ಯಾವ ಮನೆಯಲ್ಲಿ ಎರಡು ತುತ್ತು ಊಟ ಮಾಡಿರುವೆವೋ ಆ ಮನೆಗೆ ಎಂದೂ ಕೇಡು ಬಗೆಯಬಾರದು.ಇ
ದೇ ನೀತಿಯನ್ನು ಈ ಗಾದೆಯೂ ಹೇಳುತ್ತದೆ.

* * *

ಸಂಗ್ರಹ :ನಿಖಿತಾ ಶೆಟ್ಟಿ
9 ಎ

# ಸಂಖ್ಯಾ ಚತುರೆ ಶಕುಂತಲಾ ದೇವಿ

ವಿದ್ಯುತ್ ಗಣಕ ಯಂತ್ರಕ್ಕೂ ಮಿಗಿಲಾದ ವೇಗದಲ್ಲಿ ಗಣಿತ ಕ್ರಿಯೆಗಳನ್ನು ಮಾನಸಿಕವಾಗಿ ಮಾಡಿ ಕ್ಷಣ ಮಾತ್ರದಲ್ಲಿ ಉತ್ತರ ಹೇಳಬಲ್ಲ ಸಾಮರ್ಥ್ಯವುಳ್ಳ ಕನ್ನಡಿತಿ ಈಕೆ

ಐದು ವರ್ಷದ ಮಗುವಾಗಿದ್ದಾಗಲೇ ಈಕೆಯು ಸಂಖ್ಯೆಗಳ ಬಗ್ಗೆ ತನಗಿದ್ದ ಅಪ್ರತಿಮ ಪಾಂಡಿತ್ಯವನ್ನು ಪ್ರದರ್ಶಿಸಿ ಜನರನ್ನು ಅಚ್ಚರಿಗೊಳಿಸಿದಳು. ಈಕೆಯಲ್ಲಿ ದೈವೀಶಕ್ತಿಯೊಂದು ತುಂಬಿದೆ ಎಂಬುದರಲ್ಲಿ ಆಶ್ಚರ್ಯವೇನಿಲ್ಲ.ಈಕೆಯು ೪೨ ಸ್ಥಾನಗಳುಳ್ಳ ಸಂಖ್ಯೆಯ ೨೦ನೆಯ ಮೂಲವನ್ನು ಗುಣಾಕಾರ ಸಮಸ್ಯೆಗಳಲ್ಲಿ ೩೯ ಯಾವುದೇ ಅಂಕಗಣಿತ ಸಮಸ್ಯೆ ಹೇಳಿ ಮುಗಿಸುವುದೇ ತಡ,ಈಕೆಯ ಉತ್ತರ ಸಿದ್ಧವಾಗಿರುತ್ತದೆ.ಈಕೆಗೆ ಜನ್ಮತ ಒದಗಿ ಬಂದಿರುವ ಈ ಶಕ್ತಿ ಹೆಸರಾಂತ ಗಣಿತ ಯಂತ್ರ ನಿಜಕ್ಕೂ ಭಾರತದ ಬೌದಿಕ ಸಂಪತ್ತು

ಶಕುಂತಲಾದೇವಿಯು ವಿಶ್ವದಾದ್ಯಾಂತ ಪ್ರವಾಸ ಮಾಡಿ ತನ್ನಲ್ಲಿರುವ ಗಣಿತ ಕಲೆಯನ್ನು ನಿಪುಣರೆನಿಸಿದ ಗಣಿತ ಶಾಸ್ತ್ರಜರ ಮುಂದೆ ಪ್ರದರ್ಶಿಸಿ ಅವರ ಮೆಚ್ಚುಗೆಗೆ ಪಾತ್ರಳಾಗಿದ್ದಾರೆ.

* * *

**ಸಂಗ್ರಹ :ಮೂಸ ಕಲೀಂ**

**೯ ಬಿ**

# ಭಾರತದ 29 ರಾಜ್ಯಗಳು

## AT -3 BRCSNO - 1

## M -5 UKGJHP - 2

| | |
|---|---|
| A - Andhra pradesh | K - Kerala |
| A - Arunachal pradesh | M – Madhya pradesh |
| A - Assam | M – Maharasttra |
| B - Bihar | M - Manipur |
| C – Chhattisgarh | N – Nagaland |
| G – Goa | O – Odisha |
| G – Gujarhath | P - Panjab |
| H – Haryana | R – Rajasthan |
| H – Himachal pradesh | S - Sikkim |
| J - Jammu kashmir | T - Tamil Nadu |
| J - Jharkhand | T - Telangana |
| K - Karnataka | T - Tripura |
| | U - Uttarakhand |
| | U - Uttar pradesh |
| | W - West bengal |

# ಓದಿ ನೆನಪಿಡುವ ವಿಧಾನ

ನಾನು ದಿನಾಲು ನಾಲ್ಕು ಗಂಟೆ ಓದುತ್ತೇನೆ . ಆದರೂ ಓದಿದ್ದು ನೆನಪಿನಲ್ಲಿ ಉಳಿಯುದಿಲ್ಲ . ಪರೀಕ್ಷಾ ಕೊಠಡಿಯಲ್ಲಿ ಗೊತ್ತಿರುವ ಉತ್ತರಗಳು ಕೂಡ ನೆನಪಿಗೆ ಬರುವುದಿಲ್ಲ. ಅಲ್ಲಿಂದ ಹೊರ ಬಂದ ಮೇಲೆ ನೆನಪಿಗೆ ಬರುತ್ತದೆ ಎಂಬುದು ಹಲವಾರು ವಿದ್ಯಾರ್ಥಿಗಳ ಅಳಲು.ಹಾಗಾದರೆ ಉತ್ತಮ ಕಲಿಕೆ ಹಾಗೂ ನೆನಪಿಗೆ ಪ್ರೇರಕವಾಗುವ ಅಂಶಗಳು ಯಾವುವು ? ಓದಿದ್ದನ್ನು ಹೆಚ್ಚು ಸಮಯ ಜ್ಞಾಪಕದಲ್ಲಿಟ್ಟು ಕೊಳ್ಳಲು ಯಾವ ವಿಧಾನಗಳನ್ನು ಅನುಸರಿಸಭೇಕೆಂಬುದು ಇಲ್ಲದೆ .

ಆಸಕ್ತಿ ಇರಲಿ ಕೇಳುವಾಗ, ಓದುವಾಗ, ನೋಡುವಾಗ, ಆಸಕ್ತಿ ಯಿಂದ ಏಕಾಗ್ರತೆಯಿಂದ ಎಲ್ಲ ವಿವರಗಳನ್ನು ಗ್ರಹಿಸಿ ಅಭ್ಯಾಸ ನಡೆಸುವಾಗ ಏಕಾಗ್ರತೆ ಭಂಗ ತರುವ ಮೊಬೈಲ್ ಟಿ .ವಿ ಕಂಪ್ಯೂಟರ್ ನಿಂದ ದೂರವಿರಿ. ಚೆನ್ನಾಗಿ ಗಾಳಿ,ಬೆಳಕು ಬರುವ ಜಾಗದಲ್ಲಿ ಕುಳಿತು ಓದಿ.

ಅಲಿಮತ್ ತಮೀಮ

**IX A**

# ಪ್ರಚಂಡ ಮೀನುಗಳು

ಒಂದು ಸರೋವರದಲ್ಲಿ ಮೂರು ಮೀನುಗಳು ಸಂಸಾರವಾಸಿಸುತ್ತಿತ್ತು.ಅದರಲ್ಲಿ ಒಂದು ಪ್ರಚಂಡ ಬುದ್ಧಿಯ ಮೀನು,ಇನ್ನೊಂದು ಚುರುಕು ಬುದ್ಧಿಯ ಮೀನು,ಮತ್ತೊಂದು ಮಂದ ಬುದ್ಧಿಯ ಮೀನು.ಪ್ರಚಂಡ ಬುದ್ಧಿಯ ಮೀನು ಮುಂದೆ ಬರುವ ಆಪತ್ತಿಗೆ ಮೊದಲೇ ಎಚ್ಚರಿಕೆ ವಹಿಸುತ್ತಿತ್ತು.ಚುರುಕು ಬುದ್ಧಿಯ ಮೀನು ಸಮಸ್ಯೆ ಬಂದಾಗ ಎದುರಿಸಿದರೆಸಾಕು ಎಂಬ ಚಿಂತನೆಯದ್ದಾಗಿತ್ತು.ಮಂದ ಬುದ್ಧಿಯ ಮೀನು ಕಷ್ಠ ಸುಖಗಳನ್ನು ನೀಡುವವನು ದೇವರಲ್ಲವೇ?ಅದನ್ನು ಅನುಭವಿಸುವುದು ನಮ್ಮ ಧರ್ಮ ಎಂದು ತಿಳಿದಿತ್ತು.

ಒಂದು ದಿನ ಕೆಲವು ಜನ ಮೀನುಗಾರರು ಆ ದಾರಿಯಾಗಿ ಬಂದರು.ಸರೋವರದಲ್ಲಿ ಮೀನುಗಳಿರುವುದನ್ನು ಕಂಡರು.ಇನ್ನೊಮ್ಮೆ ಅಲ್ಲಿಗೆ ಬರುವಾಗ ಬಲೆ ತಂದು ಮೀನು ಹಿಡಿಯುವ ತೀರ್ಮಾನಕ್ಕೆ ಬಂದರು.ಮೀನುಗಾರರ ಮಾತನ್ನು ಕೇಳಿದ ಪ್ರಚಡ ಬುದ್ಧಿಯ ಮೀನು,"ಅವರು ಮೀನು ಹಿಡಿಯಲು ಬರುವುದಕ್ಕಿಂತ ಮೊದಲು ಇಲ್ಲಿಂದಹೋಗುವುದೇ ಕ್ಷೇಮವೆಂದು ತನ್ನ ಬಳಗದವರಲ್ಲಿ ಹೇಳಿತು.ಚುರುಕು ಬುದ್ಧಿಯ ಮೀನು ಕೂಡಾ ಆಪತ್ತನ್ನು ತಿಳಿದು ಇಲ್ಲಿರುವುದು ಸರಿಯಲ್ಲವೆಂದು ಅದು ಕೂಡಾ ತನ್ನವರನ್ನೆಲ್ಲಾಕರೆದುಕೊಂಡು ಹೋಗಲು

ತೀರ್ಮಾನಿಸಿತು.

ಆದರೆ ಮಂದಬುದ್ಧಿಯ ಮೀನು,"ನಮ್ಮ ಹಿರಿಯರು ಬದುಕಿ ಬಾಳಿದ ಈ ಸ್ಥಳವನ್ನು ಬಿಟ್ಟು ಹೋಗುವುದು ಸರಿಯಲ್ಲ.ಆ ಮೀನುಗಾರರು ಇಲ್ಲಿಗೆ ಬರಲಿಕ್ಕಿಲ್ಲ.ಬಂದಾಗ ಯೋಚಿಸೋಣ;ಎಂದು ತನ್ನವರಲ್ಲಿ ಹೇಳಿ,ಬೇರೆಕಡೆಗೆ ಕಡೆಗೆ ಹೋದ ಮೀನುಗಳನ್ನು ಹೀಯಾಳಿಸುತ್ತಾ ಅದೇ ಸರೋವರದಲ್ಲಿ ಉಳಿದುಕೊಂಡಿತು.

ನೋಡುವುದೇನು?ವಾರ ಕಳೆಯುವುದರೊಳಗೆ ಆ ಮೀನುಗಾರರು ಬಂದೇ ಬಿಟ್ಟರು.ಬಲೆಯನ್ನು ಬೀಸಿದರು.ಅಲ್ಲಿದ್ದ ಮೀನುಗಳನ್ನು ಹಿಡಿದು ಮನೆಗೆ ಕೊಂಡೊಯ್ದರು.ಅಡುಗೆ ಮಾಡಿ ಹೊಟ್ಟೆ ತಂಬಾ ತಿಂದರು.ಪ್ರಚಂಡ ಮೀನು ಮತ್ತು ಚುರುಕು ಬುದ್ಧಿಯ ಮೀನುಗಳು ಮಂದ ಬುದ್ಧಿಯ ಮೀನಿಗಾದ ಅವಸ್ಥೆಯನ್ನು ಕಂಡು ಮರುಗಿದವು.''ನಾಳೆ ಎಂದವನ ಮನೆ ಹಾಳು''ಎಂಬುದು ಸುಳ್ಳಲ್ಲ ಎಂದು ತನ್ನವರಿಗೆ ಬುದ್ಧಿ ಮಾತುಹೇಳಿದರು.

ಸಂಗ್ರಹ :ಸಾನಿಕ

**VII B**

# ಅತಿ ಆಸೆ ಗತಿಗೇಡು

ಒಂದು ಊರಿನಲ್ಲಿ ಶಿವಪ್ಪ ಎಂಬ ಬಡ ರೈತನು ತನ್ನ ಚಿಕ್ಕ ಸಂಸಾರದೊಡನೆ ತನ್ನ ಹೆಸರಿನಲ್ಲಿದ್ದ ಸಣ್ಣ ಭೂಮಿಯಲ್ಲೇ ವ್ಯವಸಾಯ ಮಾಡುತ್ತಾ ಜೀವನ ನಡೆಸುತ್ತಿದ್ದ.

ಒಂದು ದಿನ ಆತ ತನ್ನ ಜಮೀನಿನಲ್ಲಿ ಹಾವಿನ ಹುತ್ತವೊಂದನ್ನು ಕಂಡನು. ಹಾವಿನ ಬಗ್ಗೆ ಭಕ್ತಿಯಿರುವ ಆತನು ಅಷ್ಟು ಜಾಗವನ್ನು ಬಿಟ್ಟು ವ್ಯವಸಾಯ ಮಾಡತೂಡಗಿದ. ಆತ ದಿನಾಲೂ ಹುತ್ತದ ಬಳಿ ಹಾಲನ್ನಿಡುತ್ತಿದ್ದ ಹಾವು ಕುಡಿದು ತನ್ನ ಬಾಯಿಯಿಂದ ಚಿನ್ನದ ನಾಣ್ಯವನ್ನು ತೆಗೆದು ಬಟ್ಟಲಿನಲ್ಲಿಟ್ಟು ಹೋಗುತ್ತಿತ್ತು.

ಶಿವಪ್ಪ ಚಿನ್ನದ ನಾಣ್ಯಗಳನ್ನು ಮಾರಿ ಅದರಿಂದ ಬಂದ ಹಣವನ್ನು ಕೂಡಿಸಿದ ಹೀಗೆ ಆತ ಹಾವಿನಿಂದ ಪಡೆದ ಅನೇಕ ಚಿನ್ನದ ನಾಣ್ಯಗಳನ್ನು ಮಾರಿ ಬಂದ ಹಣದಿಂದ ಹೊಸ ಜಮೀನನ್ನು ಖರೀದಿ ಮಾಡಿದ. ಶ್ರಮಪಟ್ಟು ದುಡಿದ. ಬಂದ ಫಸಲಿನಿಂದ ಜೀವನ ಸಾಗಿಸಿ ಈಗ ಶ್ರೀಮಂತ ವ್ಯಕ್ತಿಯಾದ. ತಾನು ಶ್ರೀಮಂತನಾದರೂ ಸಹ ಆತ ಹಾವಿಗೆ ಹಾಲನ್ನಿಡುವುದನ್ನು ಆತ ಮರೆಯಲಿಲ್ಲ.

ಒಂದು ದಿನ ಶಿವಪ್ಪನಿಗೆ ಅನಿವಾರ್ಯವಾಗಿ ಸಂಬಂಧಿಕರ ಮನೆಗೆ ಹೋಗಬೇಕಾಗಿ ಬಂತು. ಆಗ ಶಿವಪ್ಪ ತನ್ನ ಮಗನಿಗೆ ಹುತ್ತದ ಬಳಿ ಹಾಲನ್ನು ಇಟ್ಟು ಬರಲು ಹೇಳಿದ. ಅವನ ಮಾತಿನಂತೆ ಶಿವಪ್ಪನ ಮಗ ಹುತ್ತದ ಬಳಿ ಹೋಗಿ ಹಾಲನ್ನಿಟ್ಟ. ಎಂದಿನಂತೆ ಹಾವು ಹಾಲು ಕುಡಿದ ನಂತರ ಚಿನ್ನದ ನಾಣ್ಯವನ್ನಿಟ್ಟಿತು. ಅದನ್ನು ಕಂಡ ಶಿವಪ್ಪನ ಮಗನಿಗೆ ದುರಾಲೋಚನೆಯೊಂದು ಹುಟ್ಟಿಕೊಂಡಿತು.

"ಹುತ್ತದಲ್ಲಿ ಬಹಳಷ್ಟು ನಾಣ್ಯಗಳಿವೆ. ಅದನ್ನು ಹಾವು ತಂದು ಕೊಡುತ್ತೇ' ಹುತ್ತವನ್ನು ಒಡೆದರೆ ಒಂದು ಬಾರಿಗೆ ಹಲವಾರು ನಾಣ್ಯಗಳನ್ನು ಪಡೆಯಬಹುದು. ಎಂದು ಯೋಚಿಸಿ ಅಲ್ಲಿಯೇ ಬಿದ್ದಿದ್ದ ದೊಡ್ಡ ಕೋಲಿನಿಂದ ಹುತ್ತವನ್ನು ಹೊಡೆದು ಹಾವನ್ನು ಸಾಯಿಸಿದ.

ತಾನು ಮಾಡಿದ್ದು ತಪ್ಪು ಎಂದು ಅವನಿಗೆ ಅನಂತರ ತಿಳಿಯಿತು. ಅವನು ಅಲ್ಲೇ ಕುಳಿತ. ಶಿವಪ್ಪ ಊರಿನಿಂದ ಬಂದ. ಮಗ ಎಷ್ಟು ಹೊತ್ತಾದರೂ ಬರಲಿಲ್ಲವೆಂದು ಅವನಲ್ಲಿಗೆ ಹೋದ. ಮಗ ಮಾಡಿದ ತಪ್ಪನ್ನು ಕಂಡು ಪಶ್ಚಾತ್ತಾಪಗೊಂಡ. ಹಾವು ಸತ್ತು ಬಿದ್ದುದನ್ನು ಕಂಡುದು:ಖಪಟ್ಟಕೆಲವು ದಿನಗಳ ನಂತರ ಹಾವು ಕೊಟ್ಟ ಚಿನ್ನದ ನಾಣ್ಯದಿಂದ ಖರೀದಿಸಿದ ಜಮೀನನ್ನು ಬೇರೆಯವರು ವಶಪಡಿಸಿಕೊಂಡರು. ತಾನು ಸಂಪಾದಿಸಿದ ಹಣವೆಲ್ಲಾ ಕಳುವಾಯಿತು. ಶಿವಪ್ಪ ತನ್ನ
ಮೊದಲಿನ ಸ್ಥಿತಿಗೆ ಬಂದು ನಿಂತ.

ಶಿವಪ್ಪನಿಗೆ ತನ್ನ ಮಗ ಹಾವನ್ನು ಸಾಯಿಸಿದ್ದರಿಂದಲೇ ಈ ಎಲ್ಲಾ ಪರಿಸ್ಥಿತಿ ನಿರ್ಮಾಣವಾಗಲು ಕಾರಣ ಎಂದು ತಿಳಿಯಿತು. ಮೊದಲು ಹೇಗೆ ಬಡ ರೈತನಾಗಿ ತನ್ನ ಭೂಮಿಯಲ್ಲಿ ವ್ಯವಸಾಯ ಮಾಡುತ್ತಿದ್ದನೋ ಹಾಗೆಯೇ ತನ್ನ ಜೀವನ ಮುಂದುವರೆಸಿದ ಇದರಿಂದಾಗಿ ಶಿವಪ್ಪನ ಮಗ "ಅತಿಯಾಸೆ ಗತಿಕೇಡು' ಎಂಬ ಪಾಠ ಕಲಿತನು.

* * *

**ಪುಷ್ಪಾವತಿ**

VII B

# ಲಿಟಿಲ್ ಕೈಟ್ ಶಿಬಿರ

ಜಿ. ಎಚ್. ಎಸ್ ಕಡಂಬಾರು ಶಾಲೆಯಲ್ಲಿ ತಾರೀಕು ೪\೮\೨೦೧೮ರಂದು ಒಂದು ದಿನದ ಲಿಟಿಲ್ ಕೈಟ್ ಶಿಬಿರ ನಡೆಯಿತು. ಈ ಕಾರ್ಯಕ್ರಮದಅಧ್ಯಕ್ಷತೆಯನ್ನು ರಕ್ಷಕ ಶಿಕ್ಷಕ ಸಂಘದ ಅಧ್ಯಕ್ಷರಾದ ಮೊಹಮ್ಮದ್. ಪಿ ಯವರುಅಧ್ಯಕ್ಷತೆಯನ್ನು ವಹಿಸಿದರು. ನಮ್ಮ ಶಾಲಾ ಮುಖ್ಯೋಪಾದ್ಯಾಯರದ ಶಿವಕೂಮರ್ ಸರ್ ರವರು ಉದ್ಘಾಟನೆ ಮಾಡಿದರು. ಈ ಶಿಬಿರದ ಬಗ್ಗೆ ಲಿಟಿಲ್ ಕೈಟ್ ನ ಮಾಸ್ಟರ್ ರಾದ ಮೂಸ ಸರ್ ರವರು ಮಾಹಿತಿಯನ್ನು ನೀಡಿದರು.ಧರ್ಮಾನಂದ ಕುರುಪ್ರು ಸರ್ ಅವರು ತರಗತಿಯನ್ನು ಮಾಡಿದರು. ಈ ಶಿಬಿರದಲ್ಲಿ ಎನಿಮೇಶನ್ ವೀಡಿಯೊ ಮಾಡಿ ಅದಕ್ಕೆ ಶಬ್ದವನ್ನು ಸೇರಿಸಲುಓಡಾಸಿಟಿ ಸೋಫ್ಟ್ವೇರ್ ಉಪಯೋಗಿಸಿ ಪದ್ಯವನ್ನು ರೆಕೊರ್ಡಿಂಗ್ಮಾಡಲಾಯಿತು. ನಾವು ಮಾಡಿದ ಫೋಲ್ಡರ್ ನಲ್ಲಿ ಸೇವ್ ಮಾಡಲಾಯಿತು. ***ಈ ಶಿಬಿರದಲ್ಲಿ ಹೇಮಾಲತಾ ಟೀಚರ, ಗೋಪಿ ಟೀಚರ್ ರವರು ಭಾಗವಹಿಸಿದರು***.

# ನಮ್ಮ ಮಳೆ

ಓ ಮಳೆಯೇ
ನೀನೆ ನಮ್ಮ ಮಳೆಯೇ
ನೀನಿಲ್ಲದಿದ್ದರೂ ಬಾಳೆ, ತೆಂಗು
ಎಲ್ಲಾ ಇಲ್ಲ
ನೀನಿದ್ದರೂ ಹಾನಿಗಳ
ಸುರಿಮಳೆ.
ಎಲ್ಲಾಪರಿಸರವೂ ನಿನ್ನಿಂದ ನಿರ್ಮಾಣ
ಎಲ್ಲಾ ಜೀವಗಳು ನಿನ್ನಿಂದ ನಿರ್ಮಾಣ
ಆದರೆ ನೆರೆಯನ್ನೇಕೆ ತರುವೆಯೇ
ಎಲ್ಲಾರು ನ್ನಿನ್ನ ಜಲ ಕುಡಿದರೆ
ಯಾರು ಕುಡಿಯಲ್ಲಾ ಎನ್ನಾಲ್ಲ
ಅಂತಹ ಜಲ ನೀನೆನಾ
ಎಲ್ಲರನ್ನು ನೀನು ತಡೆಯುವೆಯಾ
ನಿನ್ನ ಸುಂದರ ಅಮೃತನ್ನು
ನಾವು ಹಾಳು ಮಾಡುವೆವು
ನಿನ್ನ ಮಳೆ ತುಂಬಾ ಹಾನಿಕಾರ
ಆದರೆ ನಿನ್ನ ನೀರು ತುಂಬಾ ಉಪಕಾರ

ನೀನಿದ್ದರೆ ಮಳೆಗಾಲ

ನೀ ಹೋದರೆ ಬೇಸಿಗೆಕಾಲ

ಆದರೆ ನೀನು ಈಗ ಇರಲಾರೆ

ಯಾಕೆಂದರೆ ಈಗ ಬೇಸಿಗೆಕಾಲ

ಮನುಷ್ಯರ, ಪ್ರಾಣಿ ಪಕ್ಷಿಗಳ

ಅಮೃತವು ನೀನು

ನೀನಿಲ್ಲದಿದ್ದರೆ ನಾವೇಗೆ ಇರಲಿ

ನೀನು ಇಲ್ಲದೆ ಹೋದರೆ

ನಾವು ಇರಲಾರೆ

ನೀನು ಇದ್ದರೆ

ನಾವು ಉಳಿಯುವುದು

ನನ್ನ ಜೀವ ನೀನು

ಪ್ರತಿಯೊಂದು ಮನುಷ್ಯರ ಜೀವ ನೀನು

ಎಂದಿಗೂ ಹೋಗದಿರು

ಪ್ರತಿ ನಿಮಿಷವೂ ಜೊತೆಗಿರು

* * *

ರೀತೇಶ್

**VI A**

# ದಿನಚರಿ

ನಾನು ಕ್ರಿಸ್ ಮಸ್ ರಜೆಯ ೯ ದಿನಗಳಲ್ಲಿ ನಾನು ನನ್ನ ಮನೆಯಲ್ಲೇ ರಜಾ ದಿನಗಳನ್ನು ಕಳೆದೆನು.ಕ್ರಿಸ್ ಮಸ್ ರಜೆಯ ಮೊದಲನೆಯ ದಿನದಿಂದನ್ನನ ಎಲ್ಲಾ ಮನೆ ಕೆಲಸ ವನ್ನು ಮುಗಿಸಿದೆನು .ಎರಡನೇ ದಿನದಂದು ನಾವು ಬೇಗನೆ ಎದ್ದುಬೆಳಗ್ಗಿನ ಉಪಹಾರ ವನ್ನು ಮುಗಿಸಿ ನಾವು ಅಜ್ಜಿ ಮನೆಗೆ ಹೊರಟೆವು .

ಅಜ್ಜಿ ಮನೆಯಲ್ಲಿ ನನಗೆ ಬಹಳ ಸಂತೋಷ ಆಯಿತ. ಅಲ್ಲಿಇದ್ದುದರಿಂದ ನನಗೆ ನನ್ನ ರಜಾದಿನಗಳು ಕಳೆದುಹೋದದ್ದು ಗೊತ್ತೆ ಆಗಲಿಲ್ಲ. ಅಲ್ಲಿ ನನ್ನ ಅಜ್ಜಿಯೊಂದಿಗೆ ಬೆರೆತ ಸಮಯವನ್ನು ನಾನು ಎಂದಿಗೂ ಮರೆಯುದಿಲ್ಲ. ಅಲ್ಲಿನ ಗದ್ದೆ,ತೋಟ, ಹಚ್ಚಹಸುರಿನಿಂದ ಕಂಗೊಳಸುವ ಗಿಡ,ಮರಗಳನ್ನು ನೋಡಲು ಎರಡು ಕಣ್ಣುಗಳೇಸಾಲದು . ನನ್ನ ಅಜ್ಜಿ ಮನೆಯು ಪ್ರಕೃತಿದತ್ತ ಪ್ರದೇಶವಾಗಿದೆ. ಅಲ್ಲಿ ನಾನು ಪ್ರಾಣಿ ಪಕ್ಷಿಗಳೊಂದಿಗೆ

ಬೆರೆತ ಸಮಯ ಕೂಡ ಮನೋಹರ. ಹಾಗು ನಾನು ಅಲ್ಲಿಯ ಗೆಳೆಯರೊಂದಿಗೆ ಆಟವಾಡುತ್ತಿದ್ದೆ. ಅಜ್ಜಿ ಮನೆಯಲ್ಲಿ ನಾನು ಬೆಳಗ್ಗೆ ಬೇಗ ಎದ್ದು ಹಲ್ಲು ಹುಜ್ಜಿ ರೊಂಡು ಗದ್ದೆಯ ಮೂಲಕ ಒಂದು ಸುತ್ತು ತಿರುಗಿ ಮನೆಗೆ ತಿರುಗಿ ಬರುತ್ತಿದ್ದೆ.ಇದು ನನಗೆ ಅಜ್ಜಿ ಮನೆಯಲ್ಲಿ ರೂಡಿಯಾಗಿತ್ತು .

ಅಲ್ಲಿ ನಾನು ಬೇಗ ಎದ್ದೇಳಬೇಕು.ಇಲ್ಲದ್ದಿದ್ದರೆ ಅಜ್ಜಿ ಬಂದು ನನನ್ನು ಎಬ್ಬಿಸುತ್ತಿದ್ದರ. ಹಾಗೇ ನನ್ನ ರಜಾದಿನಗಳು ಕಳೆದವು . ಶಾಲೆ ಶುರುವಾಗುವ ಮೊದಲ ದಿನ ನಾವು ಮನೆಗೆ ಬಂದೆವು . ಅಂದು ನಾನು ರಾತ್ರಿ ಮಲಗಿದಾಗ ನನ್ನ ಅಜ್ಜಿ ಮನೆಯ ದೃಶ್ಯಗಳು ಒಂದೊಂದಾಗಿ ಕಣ್ಣ ಮುಂದೆ ಬರತೊಡಗಿದವು .ನಾನು ಎಂದಿಗೂ ನನ್ನ ಅಜ್ಜಿ ಮನೆಯನ್ನು ಮರೆಯಲಾರೆ . ನಾನು ಅಜ್ಜಿ ಮನೆಯಲ್ಲಿ ಕಳೆದ ದಿನ ವನ್ನು ಕೂಡ ಎಂದಿಗೂ ನಾನು ಮರೆಯಲಾರೆ.

ತಿಲಕ್, **VIII B**, ತರಗತಿ.

ചെറുകഥ

റൈഹനത്ത് 10B

# പാത്തുവിൻെറ ചിത്രം

നേരം ഇരുട്ടിയിട്ടും എന്നെ കാണാത്തതിൻെറ പരിഭ്രമത്തിൽ പാടത്തെ വരമ്പത്ത് നിൽക്കുന്ന ഉമ്മയെ കണ്ട കൂട്ടുകാർ പറഞ്ഞു. ഇത്തിരി വൈകുമെന്ന് പറയാമായിരുല്ലേ നിനക്ക്. വെറുതെ ആ പാവത്തെ വിഷമിപ്പിക്കണോ?കുറ്റബോധം എനിക്കും തോന്നി . അടുത്തെത്തുന്നതിനു മുമ്പ് ഉമ്മ ചോദിച്ചു ,എന്താ വൈകിയത് ബസ്സിലായിരുന്നു.എന്നെ കൈപിടിച്ച് ഉമ്മ വേഗത്തില് വീട്ടിലേക്ക് നടന്നു.ഉച്ചക്ക് ഒന്നും കഴിക്കാത്തതിൻെറവിശപ്പ് വയർ വിളിച്ച് പറയുന്നത് കൊണ്ട് തന്നെ വീട്ടിലെത്തിയ ഉടനെ ഭക്ഷണം കഴിച്ചു. ഭക്ഷണം കഴിച്ചുകഴിഞ്ഞ് പാടത്ത് കീരാകീരികളോടൊന്നിച്ച് ഒച്ച വയ്ക്കുന്ന എനിക്കു നേരെ എന്തോ നീട്ടുംബോഴാണ് രാഗിണി ടീച്ചറുടെ ഒരടിയില് ഞാൻ പരിസരബോധം വീണ്ടെടുത്തത്. ടീച്ചർ ചോദിച്ച ചോദ്യത്തിന് ഉത്തരം കിട്ടാതെ വന്നപ്പോൾഭാഷാ നോട്ടു ബുക്കും എടുത്ത് എന്നെ മുതിർന്ന അധ്യാപകൻെറ അടുത്തേക്ക് കൊണ്ടുപോയി.

ഭാഷാ നോട്ട്ബുക്ക് മുതിർന്ന അധ്യാപകൻ തുറന്ന് നോക്കിയപ്പോൾ അതില് ഞാൻ വരച്ച ചിത്രങ്ങൾ കണ്ട്മുതിർന്ന അധ്യാപകൻ എന്നെ അഭിനന്ദിച്ചു. അപ്പോൾ രാഗിണി ടീച്ചർക്ക് എവിടെന്നില്ലാത്ത ദേഷ്യം എന്നോടും മുതിർന്ന അധ്യാപകനോടും തോന്നി.ചിത്രം വരയ്ക്കാം പക്ഷേ അത് ഭാഷാ നോട്ട് ബുക്കിൽ വേണ്ട എന്ന്രാഗിണി ടീച്ചർ പറയുകയും ഇനി എന്നെ ക്ലാസിലിരുത്താൻ അനുവദിക്കുകയില്ലാ എന്നും രാഗിണി ടീച്ചർ തീർത്തു പറഞ്ഞു. അപ്പോഴാണ് കണക്ക് മാഷ് അതുവഴിവന്നത്.എന്നെ അവിടെ സമാധാനിപ്പിച്ചിരുത്തി രാഗിണിടീച്ചറെയും മുതിർന്ന അധ്യാപകനെയും കൂട്ടി കണക്കുമാഷ് അധ്യാപക മുറിയിലേക്ക് കൊണ്ട്പോയി.

കണക്കു മാഷ് അവർക്ക് ഏതാനും ചിത്രങ്ങൾ നല്കി. എന്നിട്ട് പറഞ്ഞു ഇതെല്ലാം പാത്തു വരച്ചചിത്രങ്ങളാണ്. പിന്നീട്അവളുടെ ജീവിതത്തെ കുറിച്ച് മാഷ് പറയാൻ തുടങ്ങി.ഒരു ദിവസം രാത്രിയിൽ ഞാൻ വീട്ടിലേക്ക് പോകുകയായിരുന്നു. വഴിക്കുള്ള ഒരു വീട്ടിലെ ബഹളം കേട്ട് അങ്ങോട്ട്പോയി കതകിൽമുട്ടി .കതക് തുറന്നത് ചെകുത്താനെപ്പോലുള്ള ഒരു മനുഷ്യനായിരുന്നു. ഒരു മൂലക്ക് പേടിച്ച് അരണ്ട് നിൽക്കുന്ന പാത്തു. അവളുടെ മുമ്പിൽ ഏതാനും ചിത്രങ്ങൾ ചിതറി കിടക്കുന്നു. ചെകുത്താനെപ്പോലുള്ള അവളുടെ ഉപ്പ ഒച്ചവെച്ചപ്പോൾ ഞാൻ അവിടെനിന്ന് ഇറങ്ങി നടന്നു. പിറെറന്ന് കുറേ ചിത്രങ്ങൾ എനിക്ക് തന്ന് അവൾ പോയി . ഇനി ഞാൻ വരക്കില്ല വരച്ചാൽ കൈവെട്ടുമെന്നാണ് ഉപ്പ പറഞ്ഞത് എന്ന്പറഞ്ഞ് അവൾ പേയി അവളുടെ ജീവിതമാണ് അവളുടെ ചിത്രങ്ങളിൽ കാണുന്നത്

ഭക്ഷണം കഴിക്കാത്ത എത്രയോ ദിവസങ്ങൾ അവളുടെ ജീവിതത്തിൽ.........മാഷ് പറഞ്ഞ് നിർത്തി. അധ്യാപിക തരിച്ചിരുന്നു പോയി ചിത്രങ്ങൾ അവളുടെ സന്തോഷൾ ആയിരിക്കാം അവർ പറഞ്ഞു.......ഇനി ഞാൻ അവളെ വേദനിപ്പിക്കില്ല കണ്ണിരോടെ അവർ പറഞ്ഞു

* * * * * * * * *

ഉപന്യസം 8.സി

സുബൈർ .കെ.എച്ച്

# നവകേരള സൃഷ്ടി

നമുക്കറിയാം കഴിഞ്ഞ വർഷം നമ്മുടെ കേരളത്തിൻെറ തെക്കൻ പ്രദേശം പ്രളയത്താൽ നശിച്ചു പോയെംകിലും കേരള ജനതയുടെ കൂട്ടായ്മ ആ പ്രളയത്തെ നേരിട്ടു.എന്നാൽ നൂറു കണക്കിന് വീടുകളും തോട്ടങ്ങളും കൃഷികളും വെള്ളത്തിൽ ഒഴുകിപ്പോയി.കെട്ടിടങ്ങൾ തകർന്ന് വീണു.ആയിരം ജീവനക്കാരുടെ മനസ്സിൽ ഒരു ഭയപ്പെടുത്തൽ പോലെ പ്രളയം കേരളത്തിൽ വ്യാപിച്ചു.ജനങ്ങൾക്ക് വീടും സ്ഥലങ്ങളും ഒക്കെ നഷ്ടപ്പെട്ടു. വികസനത്തിൽ വികസിതരാജ്യങ്ങൾ പോലും അസൂയയോടെ നോക്കിക്കാണുന്ന സ്ഥലങ്ങളായിരുന്ന കേരളത്തിൻെറ തെക്കൻ ജില്ലകൾ.പക്ഷെ ഏതാനും ആഴ്ചകൾക്കകം ജില്ലകൾ വെള്ളത്തിനടിയിലായി.ഇതിൽ നാം ഒരിക്കലും തകർന്ന് പോകരുത്.തകർച്ചയിൽ നിന്ന് ഉയർത്തെഴുന്നേററ അനേകം രാപകൽ! ഇപ്പോൾ ലോകംഒരു പുതിയ വർഷത്തിലേക്ക് കടന്നിരിക്കുകയാണ്. 2019 ൽ എല്ലാ ജനതയുടെയും കൂട്ടായ്മയിലൂടെ പഴയതിനെക്കാൾ നല്ല ഒരു കേരളത്തെ നമുക്ക് **വാർത്തെടുക്കാം.....**

# ಜೀವನ ಮೌಲ್ಯ ಕಲಿಸಿದ ಶಿಕ್ಷಕರು


ಸೆಪ್ಟೆಂಬರ್ 5 ರಂದು ಸರ್ವಪಳ್ಳಿ ರಾಧಾಕೃಷ್ಣನ್ ರವರ ಜನ್ಮ ದಿನವನ್ನು ಶಿಕ್ಷಕರ ದಿನವನ್ನಾಗಿ ಆಚರಿಸಲಾಗುತ್ತದೆ. ನಮ್ಮ ಶಾಲೆಯಲ್ಲಿ ಶಿಕ್ಷಕರೆಂದರೆ ನನಗೆ ತುಂಬಾ ಪ್ರೀತಿ. ಶಿಕ್ಷಕರೆಲ್ಲರೂ ಬಹಳ ಮೃದು ಸ್ವಭಾವದವರು. ಅರ್ಥವಾಗದ ವಿಷಯವನ್ನು ಕೇಳಿದರೆ ಚೆನ್ನಾಗಿ ಅರ್ಥಮಾಡಿಸುತ್ತಾರೆ. ಪಾಠ ನೆನಪಿನಲ್ಲಿ ಉಳಿಯುವುದಕ್ಕೆ ಉದಾಹರಣೆಯನ್ನು ಕೊಟ್ಟು ವಿವರಿಸುತ್ತಾರೆ. ಇದರಿಂದ ನಮಗೆ ಎಲ್ಲಾ ವಿಷಯಗಳನ್ನು ನೆನಪಿನಲ್ಲಿಟ್ಟುಕೊಳ್ಳಲು ಸುಲಭವಾಗುತ್ತದೆ. ಶಿಕ್ಷಕರೆಂದರೆ ಬರೀ ಪುಸ್ತಕದಲ್ಲಿರುವ ಪಾಠವನ್ನು ಹೇಳಿ ಕೊಡುವುದು ಮಾತ್ರವಲ್ಲ ವಿದ್ಯಾರ್ಥಿಗಳಿಗೆ ಮೌಲ್ಯ ಧಾರಿತ ಜೀವನ ಶಿಕ್ಷಣ ಬೋಧಿಸುವರು. ಶಿಕ್ಷಕರು ವಿದ್ಯಾರ್ಥಿಗಳು ತಪ್ಪು ಮಾಡಿದಾಗ ಬುದ್ಧಿ ಹೇಳಿ, ತಿದ್ದಿ ಯಶಸ್ಸಿನೆಡೆಗೆ ನಡೆಸುತ್ತಾರೆ. ಶಿಕ್ಷಕರು ವಿದ್ಯಾರ್ಥಿಗಳನ್ನು ಅಜ್ಞಾನದಿಂದ ಜ್ಞಾನದೆಡೆಗೆ ,ಅಂಧಕಾರದಿಂದ ಬೆಳಕಿನೆಡೆಗೆ , ಪಶುತ್ವದಿಂದ ಮಾನವತೆಯೆಡೆಗೆ ನಡೆಸುವರೇ ಇವರೇ ನನ್ನ ಮುಂದೆ ಗುರು ಮತ್ತು ಭಗವಂತ ಇಬ್ಬರೂ ಒಮ್ಮೆಗೆ ಬಂದರೆ ನನ್ನ ಗುರುವಿಗೆ ಮೊದಲು ವಂದಿಸುತ್ತೇನೆ . ಏಕೆಂದರೆ ಗುರುವಿನಿಂದಲೇ ಅರಿವು , ಅರಿವಿನಿಂದಲೇ ಭಗವಂತ ಪ್ರಾಪ್ತಿ ಎಂದು ಹೇಳಿದ್ದಾರೆ. ಶಿಕ್ಷಕರನ್ನು ಗೌರವಿಸುವುದು ವಿದ್ಯಾರ್ಥಿಗಳಾದ ನಮ್ಮ ಕರ್ತವ್ಯವಾಗಿದೆ.

ನಿಖಿತಾ ಶೆಟ್ಟಿ
IX A

# ಓದಿದ್ದನ್ನು  ನೆನಪಿಡುವ ವಿದಾನ

ನಾನು ದಿನಾಲು ನಾಲ್ಕೈದು ಗಂಟೆ ಓದುತ್ತೇನೆ. ಆದರು ನೆನಪಿನಲ್ಲಿ ಉಳಿಯುವುದಿಲ್ಲ. ಪರೀಕ್ಷಾಕೊಠಡಿಯಲ್ಲಿ ಗೊತ್ತಿರುವ ಉತ್ತರಗಳು ಕೂಡ ನೆನಪಿಗೆ ಬರುವುದಿಲ್ಲ. ಅಲ್ಲಿಂದ ಹೊರ ಬಂದ ಮೇಲೆ ನೆನಪಿಗೆ ಬರುತ್ತದೆ. ಎಂಬುದು ಹಲವಾರು ವಿದಾರ್ಥಿಗಳ ಅಳಲು. ಹಾಗಾದರೆ ಉತ್ತಮ ಕಲಿಕೆ ಹಾಗು ನೆನಪಿಗೆ ಪ್ರೇರಕವಾಗುವ ಅಂಶಗಳಾವುವು? ಓದಿದ್ದನ್ನು ಹೆಚ್ಚುಸಮಯ ಜ್ಞಾಪಕದಲ್ಲಿಟ್ಟುಕೊಳ್ಳಲು ಯಾವ ವಿಧಾನಗಳನ್ನುಅನುಸರಿಸಬೇಕೆಂಬುದುಇಲ್ಲಿದ. ಆಸಕ್ತಿಇರಲ; ಕೇಳುವಾಗ, ಓದುವಾಗ, ನೋಡುವಾಗ, ಆಸಕ್ತಿಯಿಂದ ಏಕಾಗ್ರತೆಯಿಂದ ಎಲ್ಲ ವಿವರಗಳನ್ನು ಗ್ರಹಿಸಿ ಅಭ್ಯಾಸ ನಡೆಸುವಾಗ ಏಕಾಗ್ರತೆಗೆ ಭಂಗ  ತರುವ ಮೊಬೈಲ್, ಟಿವಿ, ಕಂಪ್ಯೂಟರ್ ನಿಂದ ದೂರವಿರಿ. ಚೆನ್ನಾಗಿ ಗಾಳಿ, ಬೆಳಕು ಬರುವ ಜಾಗದಲ್ಲಿ ಕುಳಿತು ಬಿಡಿ.


Class: V B
Name:
Dwanith


moidin Farhan
moidin Farhan
VII A

# ನೀರು ಕುಡಿಯದ ಪ್ರಾಣಿ

ಇತ್ತೀಚೆಗೆ ಯಾವುದೇ ಪುಸ್ತಕ ಹುಡುಕುತ್ತಿದ್ದಾಗ ಹಳೆಪ್ರತಿಕೆಯೊಂದು ಕಣ್ಣಿಗೆ ಬಿತ್ತು. ಅವರಲ್ಲಿ ಒಂದು ಸುದ್ದಿ.ಓದಿ ನನಗಾದ ಆಶ್ಚರ್ಯ ಹೇಳತೀರದ್ದು ಅದನ್ನು ನಾನು ನಿಮೊಂದಿಗೆ ಹಂಚಿಕೊಳ್ಳುತ್ತೆನೆ. ಪ್ರಾಣಿ ಪಕ್ಷಿ ಹೀಗೆ ಯಾವುದೇ ಜೀವಿಯಾಗಿರಲಿ ನೀರಿಲ್ಲದೆ ಬದುಕುವುದು ಸಾಧ್ಯವಿಲ್ಲ. ಆದರೆ ತನ್ನ ಜೀವಿತಾವಧಿಯಲ್ಲಿ ಒಮ್ಮೆಯೂ ನೀರನ್ನು ಕುಡಿಯದೇ ಇರುವ ಪ್ರಾಣಿಯೊಂದಿದೆ ಅದೇ ಕಾಂಗರು ಇಲಿ . ಅಮೇರಿಕಾದ ಕ್ಯಾಲಿಫೋರ್ನಿಯಾದ ಶುಷ್ಕ ಮರುಭೂಮಿಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ.ಇದರ ಬಾಲ ಹಾಗೂ ಕಾಲುಗಳ ರಚನೆಯಲ್ಲಿ ಆಸ್ಟ್ರೇಲಿಯಾದ ಕಾಂಗರುವನ್ನೆ ಹೋಲುತ್ತದೆ ಅವುಗಳಂತೆ ನಗೆಯುತ್ತಾ ಓಡುತ್ತಾ. ಆದ್ದರಿಂದ ಇದಕ್ಕೆ ಕಾಂಗರು ಇಲಿ ಎನ್ನುತ್ತಾರೆ . ನೀರು ಏಕೆ ಕುಡಿಯಲ್ಲ.? ಇದು ಮರುಭೂಮಿಯಪ್ರಾಣಿಯಾಗಿರುವುದರಿಂದ ಅದು ತಿನ್ನುವ ಸಸ್ಯದ ಬೇರು ಮತ್ತು ಬೀಜಗಳಿಂದ ದೇಹಕ್ಕೆ ಬೇಕಾದ ತೇವಾಂಶವನ್ನು. ದೊರಕಿಸಿಕೊಳ್ಳುತ್ತದೆ . ಅದರ ಆಹಾರವೇ ನೀರು ಒದಗಿಸುವ ಕಾರಣ ಪ್ರತ್ಯೇಕವಾಗಿ ನೀರು ಕುಡಿಯುವ ಅವಶ್ಯಕತೆ ಇರುವುದಿಲ್ಲ. ಆದ್ದರಿಂದ ಜೀವಿತಾವಧಿ ಇರುವವರೆಗೆ ನೀರನ್ನೆ ಸೇವಿಸುವುದೇ ಇಲ್ಲ.

ಗೌತಮಿ

IX A

# ಜೀವನ ಮೌಲ್ಯ ಕಲಿಸಿದ ಶಿಕ್ಷಕರು

ಸೆಪ್ಟೆಂಬರ್ 5 ರಂದು ಸರ್ವಪಳ್ಳಿ ರಾಧಾಕೃಷ್ಣನ್ ರವರ ಜನ್ಮ ದಿನವನ್ನು ಶಿಕ್ಷಕರ ದಿನವನ್ನಾಗಿ ಆಚಕರಿಸಲಾಗೆತ್ತದೆ. ನಮ್ಮ ಶಾಲೆಯಲ್ಲಿ

ಶಿಕ್ಷಕರೆಂದರೆ ನನಗೆ ತುಂಬಾ ಪ್ರೀತಿ. ಶಿಕ್ಷಕರೆಲ್ಲರೂ ಬಹಳ ಮೃದು ಸ್ವಭಾವದವರು. ಅರ್ಥವಾಗದ ವಿಷಯವನ್ನು ಕೇಳಿದರೆ ಚೆನ್ನಾಗಿ ಅರ್ಥಮಾಡಿಸುತ್ತಾರೆ. ಪಾಠ ನೆನಪಿನಲ್ಲಿ ಉಳಿಯುವುದಕ್ಕೆ ಉದಾಹರಣೆಯನ್ನು ಕೊಟ್ಟು ವಿವರಿಸುತ್ತಾರೆ. ಇದರಿಂದ ನಮಗೆ ಎಲ್ಲಾ ವಿಷಯಗಳನ್ನು ನೆನಪಿನಲ್ಲಿಟ್ಟುಕೊಳ್ಳಲು ಸುಲಭವಾಗುತ್ತದೆ. ಶಿಕ್ಷಕರೆಂದರೆ ಬರೀ ಪುಸ್ತಕದಲ್ಲಿರುವ ಪಾಠವನ್ನು ಹೇಳಿ ಕೊಡುವುದು ಮಾತ್ರವಲ್ಲ ವಿದ್ಯಾರ್ಥಿಗಳಿಗೆ ಮೌಲ್ಯ ಧಾರಿತ ಜೀವನ ಶಿಕ್ಷಣ ಬೋಧಿಸುವರು. ಶಕ್ಷಕರು ವಿದ್ಯಾರ್ಥಿಗಳು ತಪ್ಪು ಮಾಡಿದಾಗ ಬುದ್ಧಿ ಹೇಳಿ, ತಿದ್ದಿ ಯಶಸ್ಸಿನೆಡೆಗೆ ನಡೆಸುತ್ತಾರೆ. ಶಿಕ್ಷಕರು ವಿದ್ಯಾರ್ಥಿಗಳನ್ನು ಅಜ್ಞಾನದಿಂದ ಜ್ಞಾನದೆಡೆಗೆ ,ಅಂಧಕಾರದಿಂದ ಬೆಳಕಿನೆಡೆಗೆ , ಪಶುತ್ವದಿಂದ ಮಾನವತೆಯೆಡೆಗೆ ನಡೆಸುವರೇ ಇವರೇ ನನ್ನ ಮುಂದೆ ಗುರು ಮತ್ತು ಭಗವಂತ ಇಬ್ಬರೂ ಒಮ್ಮೆಗೆ ಬಂದರೆ ನನ್ನ ಗುರುವಿಗೆ ಮೊದಲು ವಂದಿಸುತ್ತೆನೆ . ಏಕೆಂದರೆ ಗುರುವಿನಿಂದಲೇ ಅರಿವು , ಅರಿವಿನಿಂದಲೇ ಭಗವಂತ ಪ್ರಾಪ್ತಿ  ಎಂದು ಹೇಳಿದ್ದಾರೆ. ಶಿಕ್ಷಕರನ್ನು ಗೌರವಿಸುವುದು ವಿದ್ಯಾರ್ಥಿಗಳಾದ ನಮ್ಮ ಕರ್ತವ್ಯವಾಗಿದೆ.

ನಿಖಿತಾ ಶೆಟ್ಟಿ IX A

*****

# ಛಲದಿಂದ ಗೆಲುವು

ಹಲವು ವರ್ಷಗಳ ಹಿಂದೆ ಬಡತನದಿಂದ ಕೂಡಿದ ಕುಟುಂಬದಲ್ಲಿ ಹೆಣ್ಣು ಮಗಳು ಜನಿಸಿದಳು. ಆ ಮಗುವನ್ನು ಚೆನ್ನಾಗಿನೋಡಿಕೊಳ್ಳುತ್ತಿದ್ದರು. ಬಹಳ ಚಂದವಾಗಿತ್ತು. ಮಗುವಿಗೆ ೬ ವರ್ಷ ಕಳೆಯುತ್ತಿದ್ದಂತೆ ಮಗುವನ್ನು ಸರಕಾರಿ ಶಾಲೆಯೊಂದಕ್ಕೆ ಸೇರಿಸಿದರು.ಅವಳು ಬಹಳ ಚ್ಚೆನ್ನಾಗಿ ಓದುತ್ತಿದ್ದಳು. ಶಾಲೆಯಲ್ಲಿ ಕಲಿಯುವುದರಲ್ಲಿ ಪ್ರಥಮ ಸ್ಥಾನವನ್ನು ಗಳಿಸುತ್ತಿದ್ದಳು ಹಲವು ದಿನಗಳ ನಂತರ ಬಡತನ ಕುಟುಂಬದಲ್ಲಿ ಹುಟ್ಟಿದ ಅವಳಿಗೆ ಶ್ರೀಮಂತರಾಗಬೇಕೆಂಬ ಆಸೆಯಿತ್ತು. ನನ್ನತಂದೆತಾಯಿಯನ್ನುಚೆನ್ನಾಗಿನೋಡಿಕೊಳ್ಳಬೇಕೆಂದಿತ್ತು.ಅವಳಿಗೆಇದ್ದಕ್ಕಿಂದ್ದಂತೇ ಜ್ವರ ಬಂದು ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದಳು. ಅವಳಿಗೆ ಶಾಲೆಗೆ ಹೋಗಲು ಆಗಲಿಲ್ಲ. ಇದ್ದಕ್ಕಿಂದ್ದಂತೆ ಅವಳಿಗೆ ಪರೀಕ್ಷೆ ಎನ್ನುವಮಾತು ಕೇಳಿದಾಗ ಶಾಲೆಗೆ ಹೋಗುತ್ತೇನೆ ಎಂದು ಹಟ ಹಿಡಿಯುತ್ತಾಳೆ. ಅವಳನ್ನು ಮನೆಯಲ್ಲಿ ಬಿಡುವುದಿಲ್ಲ. ಜ್ವರ ಕಡಿಮೆಯಾಗದೇ ನೀನು ಎಲ್ಲಿಗೂ ಹೋಗಬಾರದೆಂದು ಹೇಳಿ ಒಂದುಕೋಣೆಯೊಳಗೆಬಂಧಿಸುತ್ತಾರೆ.ಹಲವಾರುದಿನಗಳುಕಳೆಯುತ್ತಿದ್ದಂತೆ ಇವಳಿಗೆ ಜ್ವರ ಕಡಿಮೆಯಾಯಿತು. ಜ್ವರ ಕಡಿಮೆಯಾಗುತ್ತಿದ್ದಂತೆ ತಾಯಿ ಶಾಲೆಗೆ ಕಳುಹಿಸಿದರು. ಇವಳ ಗೆಳತಿ ನಾಳೆ ಪರೀಕ್ಷೆ ಎಂದು ಹೇಳುವಾಗ ಅವಳಿಗೆ ನಾಳೆ ಏನು ಬರೆಯುವುದು ಎಂದು ಚಿಂತಿಸುತ್ತಿದ್ದಳು. ಇಷ್ಟು ದಿನ ಮಾಡಿದ ಪಾಠದ ನೋಟ್ ಬರಿಯಬೇಕು ಅದರ ಜೊತೆಗೆ ತಯಾರಾಗಬೇಕು ಎಂದು ಚಿಂತಿಸದೇ ಅವಳುವಿರಾಮದ ಸಮಯದಲ್ಲಿ ಓದುತ್ತಲೇ ಇದ್ದಳು. ಮನೆಯಲ್ಲಿ ರಾತ್ರಿಯಿಡೀ ಬರೆದು ಓದಿ ಮುಗಿಸಿದಳು. ಮರುದಿನಸಂತೋಷದಿಂದ ಪರೀಕ್ಷೆ ಕೋಣೆಗೆ ಹೋದಳು. ಅಧ್ಯಾಪಕರು ಪ್ರಶ್ನೆಪತ್ರಿಕೆ ಕೊಡುವಾಗ ಅವಳಿಗೆ ಎಲ್ಲಾ ಪ್ರಶ್ನೆಯ ಉತ್ತರ ತಿಳಿದಿತ್ತು. ಹೀಗೆ ದಿನಗಳು ಕಳೆದವು. ಪರೀಕ್ಷೆಯ ಮುಗಿದು ಪರೀಕ್ಷೆಯ

ಫಲಿತಾಂಶದ ದಿನ ಬಂದೇ ಬಿಟ್ಟಿತು. ಎಲ್ಲರೂ ಈ ಸಲ ಯಾರಿಗೆ ಪ್ರಥಮ ಸ್ಥಾನ ಲಭಿಸಬಹುದೆಂದು ಮಾತಾನಾಡುತ್ತಿದ್ದರು. ಅಧ್ಯಾಪಕರು ಫಲಿತಾಂಶವನ್ನು ಪ್ರಕಟಿಸಿದರು. ಕೆಲವರೂ ಮಾತ್ರವೇ ಪಾಸ್‌ಆಗಿದ್ದರೂ ಆದರೆ ಅವಳು ಅತ್ಯುತ್ತಮವಾಗಿ ಕಳಿತು ಪ್ರಥಮ ಪಡೆದುದರಿಂದ ಅವಳನ್ನು ಅಧ್ಯಾಪಕರು ಗೌರವಿಸಿದರು. ಹೀಗೆ ವರ್ಷಗಳು ಕಳೆಯುತ್ತಿದ್ದಂತೆ ಎಸ್ ಎಸ್ ಎಲ್ ಸಿ ಪರೀಕ್ಷೆಯ ದಿನಗಳು ಬಂದೇ ಬಿಟ್ಟಿತು. ಅವಳು ಸಮಯವ್ರೂ ಹಾಳೂ ಮಾಡದೇ ಪರೀಕ್ಷೆಗೆ ತಯಾರಾದಳು. ಇವಳು ಪರೀಕ್ಷೆ ಬರೆದಳು. ಎಲ್ಲಾ ವಿಷಯಗಳಲ್ಲಿಯೂ " ಎ+ 'ಗ್ರೇಡ್ನೊಂದಿಗೆ ಪ್ರಥಮ ಸ್ಥಾನವನ್ನು ಪಡೆದು ಇವಳ ತಂದೆ ತಾಯಿ ಹಾಗೂ ಶಾಲೆಗೆ ಹೆಸರು ತಂದಳು.ಇಲ್ಲಿಗೆ ಇವಳ ವಿದ್ಯಾಭ್ಯಾಸವು ಮುಗಿಯಲಿಲ್ಲ. ವರ್ಷಗಳು ಕಳೆಯುತ್ತಿದ್ದಂತೆ ವಿದ್ಯಾಭ್ಯಾಸವ್ರೂ ಹೆಚ್ಚುತ್ತಲೇ ಹೋಯಿತು. ಅವಳು ಕೆಲಸವೊಂದಕ್ಕೆ ಅರ್ಜಿಯಾಕುತ್ತಾಳೆ. ಇವಳಿಗೆ ಇಂಜಿನಿಯರಿಂಗ್ ಕೆಲಸವು ಲಭಿಸಿತು. ಇವಳಿಗೆ

ತಂದೆತಾಯಿಯನ್ನು ಚೆನ್ನಾಗಿ ನೋಡಬೇಕೆಂಬ ಆಸೆ ಅರ್ಧದಷ್ಟು ಮುಗಿದ್ದಂತಾಯಿತು. ಕೆಲಸ ಹೋಗಿ ಬಂದ ಹಣದಿಂದ ತಂದೆ ತಾಯಿಯನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದಳು. ಅವಳು ಓದಿ ಉತ್ತಮ ಕೆಲಸ ಪಡೆಯಬೇಕೆಂಬ ಆಸೆಯನ್ನು ಪೂರೈಸಿದಳು. ಅವಳು ಒಳ್ಳೆಯ ಹುಡುಗಿ ಎಂಬ ಹೆಸರನ್ನು ಗಳಿಸಿದಳು.

**ನಿಖಿತಾ ಶೆಟ್ಟಿ**

IX A

**********

# ಕೃಷಿಯೇ ಜೀವನ

ಒಂದು ಪಟ್ಟಣದಲ್ಲಿ ಒಬ್ಬ ಶ್ರೀಮಂತ ವ್ಯಕ್ತಿ ಇದ್ದನು. ಅವನಿಗೆ ಯಾವುದರಲ್ಲಿ ಒಂದು ಕೊರತೆಯು ಇಲ್ಲ. ಶ್ರೀಮಂತನಾದ ಇವನಿಗೆ ಒಂದು ಮನೆ ಇತ್ತು. ಮನೆಯಲ್ಲಿ ಹೆಂಡತಿ ಮತ್ತು ಮೂರು ಹೆಣ್ಣು ಮಕ್ಕಳಿದ್ದರು. ಇವನಿಗೆ ಸಂಪತ್ತಿನಲ್ಲಿಕೊರತೆ ಇರಲಿಲ್ಲ. ಆದರೆ ನೆಮ್ಮದಿ ಇರುತ್ತಿರಲಿಲ್ಲ. ಇವನು ಕುಡಿಯುವ ಕಾರಣ ಮನೆಯಲ್ಲಿ ಯಾವಾಗಲೂ ಜಗಳವಾಗುತ್ತಿತ್ತು . ಹೆಂಡತಿ ಮತ್ತು ಗಂಡ ಪ್ರತಿ ದಿನಜಗಳ ಮಾಡುತ್ತಿದ್ದರು. ಕ್ರಮೇಣ ಎಲ್ಲಾ ಆಸ್ತಿಗಳನ್ನು ನಷ್ಟ ಮಾಡಿಕೊಂಡು ಕೊನೆಗೆ ಯಾವ ಆಸ್ತಿಯು ಇಲ್ಲದಾಯಿತು. ಹೆಂಡತಿ ಇದನ್ನು ನೋಡಿ ಜೀವ ಬಿಟ್ಟುಕೊಂಡಳು. ಹೆಣ್ಣು ಮಕ್ಕಳಿಗೆ ದಾರಿ ಇಲ್ಲದಾಯಿತು. ನಂತರ ಅವನಿಗೆ ಜ್ಞಾನ ಉಂಟಾಯಿತು. ಕೊನೆಗೆ ಅವನು ಒಂದು ಹಳ್ಳಿಗೆ ಬಂದ ಅಲ್ಲಿ ಸ್ವಲ್ಪ ಜಾಗ ತೆಗೆದು ಕೃಷಿಯನ್ನು ಮಾಡಲು ಆರಂಭಿಸಿದನು. ಕೃಷಿಯಿಂದ ಬಂದ ಹಣದಿಂದ ಹೆಣ್ಣು ಮಕ್ಕಳನ್ನು ಸಾಕಿದನು. ಅವರಿಗೆ ಉತ್ತಮ ಶಿಕ್ಷಣವನ್ನು ನೀಡಿದನು. ಕೃಷಿಯಲ್ಲಿ ಸಂಪೂರ್ಣವಾಗಿ ತೊಡಗಿಕೊಂಡನು. ಶ್ರೀಮಂತವಾದ ವ್ಯಕ್ತಿ ಕೃಷಿಯನ್ನು ಮಾಡಿಕೊಂಡು ನೆಮ್ಮದಿಯ ಜೀವನವನ್ನು ಮಾಡಿದನು. ಕೃಷಿಯಿಂದ ನೆಮ್ಮದಿಯು ಸಿಕ್ಕಿತು , ವ್ಯಾಯಮವು ಸಿಕ್ಕಿತು. ಮಕ್ಕಳು ಉತ್ತಮ ರೀತಿಯಲ್ಲಿ ಕಲಿತರು. ಮುಂದೆ ಕೃಷಿಯಿಂದ ಉತ್ತಮ ಜೀವನವನ್ನು ತನ್ನದಾಗಿಸಿಕೊಂಡನು.

* * *

ವಿದ್ಯಾ ಶ್ರೀ, X ಎ

# ಅಮ್ಮ ಎಂದರೆ ಏನೋ ಹರಷವೂ

ಅಮ್ಮ ಎಂಬ ಪದವೇ ಅಪ್ತ. ನಮ್ಮನ್ನು ಹೋತ್ತು – ಹೆತ್ತು ಪೊರೆಯುವಳು ಅವಳೇ ಅಮ್ಮ ನಮ್ಮ ಬೇಕು ಬೇಡಿಕೆಗಳನ್ನುಪೂರೈಸುತ್ತಾಳೆ. ಸದಾ ಜತೆಯಲ್ಲಿರುತ್ತಾರೆ. ನಾವು ಹೋಮ್ ವರ್ಕ್ ಮಾಡಿ , ಓದು ಎಂದರೆ ಬೇಸರ ಮಾಡಿ ಕೋಳ್ಳುತ್ತೇನೆ. ಆದರೆ ಅವಳುದಿನವೂ ನಮ್ಮೆಲ್ಲರ ಕೆಲಸಗಳನ್ನು ಚಾಚೂ ತುಪ್ಪದೆ ಮಾಡುತ್ತಿದ್ದರೂಒಂದುದಿನವು ಬೇಸರವಾರಿಗಿದೆ ಎಂದು ಹೇಳುವುದಿಲ್ಲ. ಮಕ್ಕಳಖುಷಿಯಲ್ಲಿ ತಾನು ಸಂತೋಷ ಕಾಣುತ್ತಾಳೆ. ಆದರೆ ತಾವು ಏಷೋವೇಳೆ ಅವಳ ಭಾವನೆಗಳಿಗೆ ಬೆತಿಕೋಡುವುದಿಲ್ಲ. ಅಮ್ಮ ಏನು ಹೇತ್ತಿದ್ದಾಳೆಎಂದು ಕೇಳಿಕೋಳ್ಳದೇ ಜಗಳವಾಡುತೇವೆ. ಇದು ತಪ್ಪು ಗೆಳೆಯರೇಅಮ್ಮನ ಜತೆಗಿದ್ದಾಗ ಅವಳಬೆಲೆ ನಮಗೆ ಗೊತ್ತಾಗುವುದಿಲ್ಲ. ಆದರೆಒಂದು ದಿನ ಅವಳು ಮನೆಯಲ್ಲಿ ಇಲ್ಲದೆಂದರೆ ಅವಳ ಮಹತ್ವ ತಿಳಿಯುತ್ತದೆ. ಈ ಅನುಭವ ನನಗೂ ಆಗಿದೆ. ಈಗ ಅಮ್ಮನೇ ನನಗೆಲ್ಲ ನಾನು ಇಂದು ಏನಾಗಿದ್ದೆನೋ ಅದಕ್ಕೆ ಅವಳೇ ಕಾರಣ. ನಮ್ಮಲ್ಲಿ ಸಾದಿಸುವ ಛಲ ತುಂಬಿದವಳು ಅಮ್ಮ ನಮ್ಮೆಲ್ಲ ಕನಸಿಗೆ ಬೆನ್ನೆಲುಬಾಗಿ ನಿಂತಿದ್ದಾಳೆ. ಅಪ್ಪ ಕೂಡ ಅದಕ್ಕೆ ಪ್ರೋತ್ಸಾಹ ನೀಡುತ್ತಿದ್ದಾರೆ. ಅವರಿಗೆನಾನೆಷ್ಟು ಕೃತಜ್ಞತೆ ಹೇಳಿದರೂ ಸಾಲದು.ಅಮ್ಮ ನಿನಗೆ ನನ್ನ ತುಂಬು ಹೃದಯದ ಧನ್ಯವಾದ.

ಗೌತಮಿ, 9A

************

# ಸಂಖ್ಯೆಗಳ ಮೋಜು

1) 1x8+1=9

11x8+11=99

111x8+111=999

1111x8+1111=9999

11111x8+11111=99999

111111x8+111111=999999

2) 1x9=9

11x9=99

101x99=9999

1001x999=999999

10001x9999=999999999

3) 1+8=9

2+7=9

3+6=9

4+5=9

5+4=9

6+3=9

7+2=9

8+1=9

Mohammed Ameer IX A

# ಮಳೆ

ಬಂತು ಬಂತು ಮಳೆ
ಬಂತು ಬಂತು ಮಳೆ
ಕೊಡೆ ಬಿಡಿಸಿ ನಡೆ
ಮಕ್ಕಳಿಗೆ ಬಾರಿ ಖುಷಿ

ಬಂತು ಬಂತು ಮಳೆ
ಬಂತು ಬಂತು ಮಳೆ
ನೀರು ಕುಡಿಯಲು
ಎಲ್ಲಾ ಮಾಡಲು ಮಳೆಯಿಲ್ಲದೆ ಸಾಧ್ಯವಿಲ್ಲ

ಮಳೆ ಇಲ್ಲದೆ ನಾವಿಲ್ಲ
ಮಳೆಯೇ ನಮ್ಮ ಎಲ್ಲ
ಎಂದೆಂದಿಗೂ ಮಳೆ ಬೇಕು
ಮಳಯನ್ನು ಎಣಿಸಲು ಸಾಧ್ಯವಿಲ್ಲ

ಬಂತು ಬಂತು ಮಳೆ
ಬಂತು ಬಂತು ಮಳೆ
ನಮಗೆ ಮಳೆ ಎಂದರೆ ಇಷ್ಟ
ಮಳೆ ಇಲ್ಲದೆ ಕಷ್ಟ

ಬಂತು ಬಂತು ಮಳೆ
ಬಂತು ಬಂತು ಮಳೆ
ಮಳೆಯೇ ನಮ್ಮ ಸಂಪತ್ತು
ಮಳೆ ಇಲ್ಲದೇ ಆಪತ್ತು
ಮಳೆಯೇ ಮಳೆಯೇ ಮಳೆಯೇ

ಮಳೆ ಇಲ್ಲದೆ ನೀರಿಲ್ಲ

ನೀರಿಲ್ಲದಿದ್ದರೆ ನಾವಿಲ್ಲ

ನಾವಿಲ್ಲದಿದ್ದರೆ ಭೂಮಿಲ್ಲ

ಕಣ್ಮರೆಯಾಯಿತು ಬಿಸಿಲು
ಮಳೆಯಕಾಲವು ಬಂದಿತು
ಎಲ್ಲರಿಗೂ ಇಷ್ಟ ಮಳೆ
ಮಳೆಯನ್ನು ನೋಡಲು ಆಸೆಯಾಯಿತು
ಮಳೆಯು ಬಂದಿತು ಬೇಗ

ಬಂತು ಬಂತು ಮಳೆ

ಬಂತು ಬಂತು ಮಳೆ

ಗದ್ದೆಯು ಬೆಳೆಯುತ್ತಾ ಬಂದಿತು

ನಮಗೂ ಅನ್ನವೂ ಸಿಕ್ಕಿತು

ಕೃಷಿಯೂ ಬೆಳೆಯುತ ಬಂದಿತು
ನಮಗೆ ಉಣ್ಣಲು ಸಿಕ್ಕಿತು
ಬಂತು ಬಂತು ಮಳೆ

ಬಂತು ಬಂತು ಮಳೆ

Kadeejath Mubeena

VI B

********

# ಜಾಣ್ಮೆ ಗಣಿತ

## 9 ರ ಮ್ಯಾಜಿಕ್

0x9+1=1
1x9+2=11
12x9+3=111
123x9+4=1111
1234x9+5=11111
12345x9+6=111111
123456x9+7=1111111
1234567x9+8=11111111
12345678x9+9=111111111

9x9=81
99x99=9801
999x999=998001
9999x9999=99980001
99999x99999=9999800001

ಫಾತಿಮತ್ ತಬ್ ಶೀರ

IX B



Vaishak.ay Acharya

IX A

# ಮಳೆಯ ರಭಸ

ಬಂತು ಮಳೆ ಬಂತು
ರಭಸದಿ ಸುರಿದು ಬಂತು
ಮಳೆಯ ಸದ್ದನ್ನು ಕೇಳಿ
ಖುಷಿಯಿಂದ ಕುಣಿದಾಡಿದೆನು

ಮಳೆಯ ಸಂಗರ್ಭದಲ್ಲಿ
ಕೊಡೆಯ ಬಿಡಿಸಿದೆ ಯಲ್ಲಿ
ಕೊಡೆಯನು ಹಿಡಿಯುತ್ತ
ಮಳಯಲ್ಲಿ ನೆನೆದೆನು

ತಂಪನ್ನು ನೀಡುವ ಆ ಮಳೆ
ನನಗೆ ಖುಷಿಯನ್ನು ಕೊಡುವ ಆ ಮಳೆ
ಚಟ....ಚಟ....ಎಂದು
ಸದ್ದನ್ನು ಮಾಡುತ್ತಾ

ಮನೆಯಲ್ಲಿರುವ ಮಕ್ಕಳನ್ನು
ಎಬ್ಬಿಸಿ ಕುಣಿದಾಡುತ್ತ
ಸಂತೋಷದಿಂದ ನಲಿಸುವ
ಬಂತು ಮಳೆ ಬಂತು

ಬನ್ನಿರಿ ಬನ್ನಿರಿ ಮಕ್ಕಳೇ
ಮಳೆಯಲ್ಲಿ ಆಟವಾಡುತ
ಹರುಷದಿಂದ ನಲಿದಾಡುವ

Ramya
VII B

***********